ಅಪರಂಜಿ

ಆಗಸ್ಟ್ 98

ತಿಳಿನಗೆಯ ಕಾರಂಜಿ



ಪ್ರಕಾಶ್

ಅಣ್ಣಾಸ್ವಾಮಿ ಮೊದಲಿಯಾರ್

ಭೂಷಿ

ಗೌತಮ

ಶೀನೂ

ನಾಗೂಶ್ರೀ ಸೂರಿ

ಬೇಲೂರು ರಾಮಮೂರ್ತಿ

ಎಂ.ಎನ್.ಕೆ.

ಎಚ್. ಗೋಪಾಲಕೃಷ್ಣ

ಲೀಲಾ ಶೇಖರ್

ಬಿಡಿ ಪ್ರತಿ: ರೂ. 3.50



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 15 ಆಗಸ್ಟ್ '98 ಸಂಚಿಕೆ- 11

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



○ ಪ್ರಕಾಶ್

ನಂ ಪಾರ್ಲಿಮೆಂಟಲ್ಲೂ 'ರೆಡ್ ಕಾರ್ಡ್' ತೋರಿಸುವ ಪದ್ಧತಿಯನ್ನು ಜಾರಿಗೆ ತರಲೇಬೇಕು!!

★★★

ಸೋನಿಯಾ - ಜಯಾಗಳ ನಡುವೆ ವಾಜಪೇಯೀ ಬಡವಾದರು!!

★★★

ನಾಟಕಗಳು ಜನರಿಗೆ ತಲಪಬೇಕು

- ಹೇಳಿಕೆ

ಜನರೂ ನಾಟಕಗಳಿಗೆ ತಲಪಬೇಕಲ್ಲ??

★★★

ವಸ್ತುನಿಷ್ಠ ವರದಿ; ಪತ್ರಕರ್ತರಿಗೆ ಕರೆ

- ಶೀರ್ಷಿಕೆ

ಹಾಗೆ ಬರೆದರೆ ಯಾರೂ ಓದುಲ್ಲವಲ್ಲ!!

★★★

ರಾಜಕೀಯ ಶಕ್ತಿಯಿಂದ ದಲಿತರ ಸಮಸ್ಯೆ ಪರಿಹಾರ

- ಹೇಳಿಕೆ

ಆಶಾವಾದ ಎಂದರೆ ಇದೇ!!

★★★

ಹೊಸ ರಾಜ್ಯ ರಚನೆ ಮಕ್ಕಳ ಆಟವೆ?

- ಶ್ರೀ ಚಂದ್ರಶೇಖರ್

ಹಾಗೇ ಕಾಣುತ್ತೆ!!

★★★

ಕೇಂದ್ರ ಸರ್ಕಾರ ಪತನ ಅಸಂಭವ

- ಪತ್ರಿಕೆ

ನಿಂತೇ ಇಲ್ಲದ ಸರ್ಕಾರ 'ಪತನ' ಹೇಗಾಗುತ್ತೆ??

★★★

"ಚೀನಾದಿಂದ ಇನ್ನೊಂದು ನ್ಯೂಕ್ಲಿಯರ್ ಸ್ಫೋಟ"

ಹೆದರಬೇಡಿ, 1973ರ ಸುದ್ಧಿ!!

★★★

ಚೀಟಿ ವ್ಯವಹಾರ ನಡೆಸುತ್ತಿದ್ದ ದಂಪತಿ ವಿದೇಶಕ್ಕೆ ಪರಾರಿ

- ಸುದ್ದಿ

ಅವರ 'ದಂ'ಗೇ ಅಚ್ಚರಿ ಪಡಬೇಕು!!

★★★



ಇದಿಟ್ಕೊಳ್ಳಿ, ಲೋಕಾಯುಕ್ತರ ಹತ್ರ ಸಾಕ್ಷಿ ಸರ್ರ್ಯಾಗಿ ಹೇಳ್ಬಿಡಿ, ಅಷ್ಟೇ!

ವಾತಾಪಿ ಜೀರ್ಣೋಭವ

- ಅಣ್ಣಾಸ್ವಾಮಿ ಮೊದಲಿಯಾರ್

ಮಹಾಭಾರತ ಮಹಾಕಾವ್ಯದಲ್ಲಿ ಅಗಸ್ತ್ಯ ಮಹರ್ಷಿ ವಾತಾಪಿ ಎಂಬ ದೈತ್ಯನು ಮೇಷರೂಪದಲ್ಲಿದ್ದಾಗ ಅಡಿಗೆ ಮಾಡಿಕೊಂಡು ತಿಂದು ವಾತಾಪಿ ಜೀರ್ಣೋಭವ' ಅಂತ ಹೇಳಿ ದೊಡ್ಡ ತೇಗು ಹಾಕಿ ಜೀರ್ಣ ಮಾಡಿಕೊಂಡ ಕಥೆ ನೀವೆಲ್ಲ ಕೇಳಿರಬಹುದು ಅಥವಾ ಓದಿರಬಹುದು. ಒಂದು ಕುರಿ ಮಾಂಸವನ್ನು ಅಗಸ್ತ್ಯರು ತಿಂದು ಜೀರ್ಣಮಾಡಿಕೊಂಡರು ಅಂದರೆ ಅವರ ಜೀರ್ಣಶಕ್ತಿ ಎಷ್ಟಿರಬೇಕು? ಅವರೇನು ಸಾಮಾನ್ಯರೇ ನಮ್ಮ ಹಾಗೆ, ಸಮುದ್ರರಾಜನ ಮೇಲೆ ಕೋಪಿಸಿಕೊಂಡು ಸಪ್ತಸಮುದ್ರಗಳ ನೀರನ್ನು ಕುಡಿದು ಏನೂ ಆಗದವರಂತೆ ಇದ್ದವರು. ತನ್ನ ಕಮಂಡಲದ ನೀರಿನಿಂದ ಕಾವೇರಿ ನದಿಯನ್ನು ಸೃಷ್ಟಿಸಿದವರು. ಗಗನದೆತ್ತರಕ್ಕೆ ಬೆಳೆಯುತ್ತಿದ್ದ ವಿಂಧ್ಯಪರ್ವತವನ್ನು ತಲೆಬಾಗಿಸಿ ಬೆಳೆಯದಂತೆ ಮಾಡಿದವರು. ನಾನು ಇಲ್ಲಿ ಅಗಸ್ತ್ಯರ ಬಗ್ಗೆ ಬರೆಯಲು ಹೊರಟಿಲ್ಲ. ಜೀರ್ಣಶಕ್ತಿಯ ಬಗ್ಗೆ ಹೇಳ ಹೊರಟಿದ್ದೇನೆ. ಯಾಕೆಂದ್ರೆ! ನನ್ನ ಗೆಳೆಯ 'ಉಂಡಾಡಿ ಗುಂಡಣ್ಣ' ಇದ್ದಾನಲ್ಲ, ಅವನು ಸಹ ಹೀಗೇ ಅಗಸ್ತ್ಯರ ಹಾಗೆ ತುಂಬ ಜೀರ್ಣಶಕ್ತಿ ಉಳ್ಳವನು. ನಮ್ಮ ಕಾಲದಲ್ಲಿ ಈಗಿನ ಹಾಗೆ ತರಕಾರಿ ಕತ್ತರಿಸೋಕೆ ಗಿನ್ನೀಸ್ ರಿಕಾರ್ಡ್, ಎಲೆಕ್ಷನ್‌ನಲ್ಲಿ ಹೆಚ್ಚು ಸೋತಿದ್ದಕ್ಕೆ ಗಿನ್ನೀಸ್ ರಿಕಾರ್ಡ್, ಹೀಗೆ ಕೂತರೆ-ನಿಂತರ ವಿಶ್ವರೆಕಾರ್ಡ್ ಇರಲಿಲ್ಲ. ಈಗಿನ ಕಾಲವಾಗಿದ್ದರೆ ಖಂಡಿತ ಉಂಡಾಡಿಗುಂಡ ತಿನ್ನುವುದರಲ್ಲಿ, ತಿಂದು ಜೀರ್ಣಿಸಿಕೊಳ್ಳುವುದರಲ್ಲಿ ಗಿನ್ನೀಸ್‌ರೆಕಾರ್ಡ್ ವಿಶ್ವದಾಖಲೆ ಮಾಡ್ತಿದ್ದ ಅಂತ ಕಾಣತ್ತೆ.

ಯಾವುದು ಹೇಗೆ ಇರಲಿ, ನಂಬಿದರೆ ನಂಬಿ ಬಿಟ್ಟರೆ ಬಿಡಿ, ತಿನ್ನುವುದು - ತಿಂದು ಜೀರ್ಣಿಸಿಕೊಂಡು ಏನೂ ಆಗದವರಂತೆ ಇರುವುದು ಎಲ್ಲರಿಗೂ ಸಾಧ್ಯವಿಲ್ಲ ಅದೊಂದು ವಿಶಿಷ್ಟವಾದ ಕಲೆ. ಬೋಫೋರ್ಸ್ ಪ್ರಕರಣ. ಹರ್ಷದ್ ಮೆಹ್ತಾ ಪ್ರಕರಣ, ಬೂಸಾ ಪ್ರಕರಣ ಹೀಗೆ ಹತ್ತು ಹಲವಾರು ಪ್ರಕರಣಗಳಲ್ಲಿ ಕೋಟಿಗಟ್ಟಲೆ ಹಣವನ್ನು ನುಂಗಿ ನೀರು ಕುಡಿದು ಏನೂ ಆಗದವರಂತೆ ಇನ್ನೂ ಹೊರಗೆ, ಅದೂ ರಾಜಕೀಯ ರಂಗದಲ್ಲಿ ಇರುವವರನ್ನು ನೋಡಿದರೆ, ಇವರೆಲ್ಲಾ ಬಕಾಸುರರನ್ನು ಕೊಂದು ಮೂರು ಬಂಡಿ ಆಹಾರವನ್ನು ತಿಂದು ತೇಗಿ ನೀರುಕುಡಿದ ಮಹಾಬಲ ಭೀಮನ ವಂಶಕ್ಕೆ ಸೇರಿದವರಿರಬಹುದೇ? ಎಂಬ ಸಂಶಯ ಬರುತ್ತೆ.

★★★

ನನ್ನ ಗೆಳೆಯ ಪಾಂಡುರಂಗಿ ಮದುವೆಗೆ ಹುಬ್ಬಳ್ಳೀಗೆ ಹೋಗಿದ್ದೆ. ನನ್ನ ಜೊತೆ ಉಂಡಾಡಿಗುಂಡನೂ ಬಂದಿದ್ದ. ನಾವಿಬ್ಬರೂ ಬಾಲ್ಯಗೆಳೆಯರು. ಪಾಂಡುರಂಗಿ ನಮ್ಮಿಬ್ಬರಿಗೂ ಸ್ನೇಹಿತ. ಹೀಗಾಗಿ ನಾವಿಬ್ಬರೂ ಹುಬ್ಬಳ್ಳಿಗೆ ಹೋಗಿದ್ದೆವು. ವರಪೂಜೆಯ ದಿನ ವರನಿಗಿಂತ, ವರನ ಗೆಳೆಯರಿಗೇ ಹೆಚ್ಚು ಮರ್ಯಾದೆ ನಡೆಯಿತು.

ಬೆಂಗಳೂರಿನಿಂದ ಹೈಟೆಕ್ ಬಸ್ಸಿನಲ್ಲಿ ಹೊರಟು ಹುಬ್ಬಳ್ಳಿ ಸೇರಿದಾಗ ಸಂಜೆಯಾಗಿತ್ತು. ಮದುವೆ ಛತ್ರದ ಮುಂದೆ ಬಸ್ಸು ನಿಂತು, ಬಸ್ಸಿನಿಂದು ಇಳಿದು ಕೈಕಾಲುಗಳನ್ನು ಆಡಿಸಿದಾಗ, ಏರ್‌ಕಂಡೀಷನ್ಡ್ ಬಸ್ ಪ್ರಯಾಣಕ್ಕಿಂತ ಹಿತಕರವಾಗಿತ್ತು. ನಾಲ್ಕುಜನ ಛತ್ರದ ಮುಂದೆ ಕುರ್ಚಿಗಳನ್ನು ಹಾಕಿ ಕುಳ್ಳಿರಿಸಿದರು. ಎಳನೀರು- ನಿಂಬೆಹಣ್ಣು ಪಾನಕ ಸರಬರಾಜಾಯಿತು. ನಂತರ ಘಮ-ಘಮ ಎಂದು ವಾಸನೆ ಕೂಡಿದ ಅಸಲಿ ಮಂಡ್ಯ ತುಪ್ಪದಲ್ಲಿ ಮಾಡಿದ ಸಿರಾ(ಕೇಸರಿಬಾತ್) ಬಟಾಣಿ, ಗೋಡಂಬಿ, ಹುರುಳಿಕಾಯಿ ಚೂರುಗಳನ್ನು ಹಾಕಿದ ಬಿಸಿ ಬಿಸಿ ಬಾತ್ ಬಂತು. ಬಾದಾಮಿ ಅರೆದು, ಅದರ ಹಾಲಿಗೆ ಯಾಲಕ್ಕಿ, ಜೀರಿಗೆ, ಬಿಸಿ ಬಿಸಿ ಕಾಸಿದ ನೀರು ಬೆರೆಸದ ಅಪ್ಪಟ ಹಾಲು ಸೇರಿಸಿ ಕುಡಿಯಲು ಕೊಟ್ಟರು. ಛತ್ರದ ಮಹಡಿ ಮೇಲಿದ್ದ ಎರಡು ರೂಂಗಳನ್ನು ನಮ್ಮ ಬಿಡದಿಗೆಂದು ಬಿಟ್ಟುಕೊಟ್ಟರು.

ವರಪೂಜೆ ಮುಗಿದು, ಶಾಸ್ತ್ರಗಳೆಲ್ಲ ಆದಮೇಲೆ ಭರ್ಜರಿ ಊಟ ಆಯಿತು. ಕೆಲವರು ಹೊಟ್ಟೆ ಭಾರಕ್ಕೆ ಮಲಗಿ ನಿದ್ದೆಗೆ ವಶರಾದರು. ಕೆಲವರು ಹೊಟ್ಟೆ ಭಾರಕ್ಕೆ ನಿದ್ದೆ ಬಾರದೆ ಛತ್ರದ ಹೊರಗಡೆ ಇದ್ದ ಹುಲ್ಲಿನ ಹಾಸಿನ ಮೇಲೆ ತಂಗಾಳಿಗೆ ಕೂತು ಹರಟೆ ಹೊಡೆಯತೊಡಗಿದರು. ಇನ್ನು ಕೆಲವರು ಬಿಡದಿ ರೂಂನಲ್ಲಿ ಇಸ್ಪೀಟು ಆಟದಲ್ಲಿ ತೊಡಗಿದರು. ನಾನು ಪ್ರೇಕ್ಷಕನಾಗಿ ಕುಳಿತಿದ್ದೆ, ಗುಂಡಣ್ಣ ಇಸ್ಪೀಟು ಆಟದಲ್ಲಿ ಜೇಬಿನಲ್ಲಿದ್ದ ಹಣವೆಲ್ಲಾ ಕಳೆದುಕೊಂಡ. ಮಾರನೆ ದಿನ ಪಾಂಡುರಂಗಿಗೆ ಮುಯ್ಯಿ ಹಾಕಲು ಹಣವಿಲ್ಲ. ಬಸ್ ಉಚಿತವಾದ್ದರಿಂದ ಊರು ಸೇರುವುದು ಕಷ್ಟವಿರಲಿಲ್ಲ. ಪಾಕೆಟ್‌ಮನಿಗೆ ನನ್ನ ಕಡೆ ಕೈಚಾಚಿದ. ನಾನು ಅವನನ್ನು ಅಲ್ಲಿಂದ ಎಬ್ಬಿಸಿ ಹೊರಗೆ ಕರೆತಂದೆ. ಹರಟೆ ಗುಂಪಿಗೆ ನಾವು ಸೇರಿದೆವು. ಪೈಲ್ವಾನ್ ವರದಪ್ಪ ತನ್ನ ಸಾಹಸಗಳನ್ನು ಹೇಳುತ್ತಿದ್ದ. ಯಾವ ಯಾವ ಊರಿನಲ್ಲಿ ಎಂಥೆಂಥ ಜಟ್ಟಿಗಳನ್ನು ನಾನು ಕುಸ್ತಿಯಲ್ಲಿ ಸೋಲಿಸಿದೆ, ಅದಕ್ಕೆ ಹೇಗೆಲ್ಲಾ ತಯಾರಿ ನಡೆಸಿದೆ ಎಂದೆಲ್ಲಾ ಹೇಳುತ್ತಿದ್ದ. ಮಾತಿನ ನಡುವೆ ಅವನು ಹತ್ತು ಹೋಳಿಗೆಗಳನ್ನು ತಿಂದ ವಿಷಯ ಬಂತು. ಇದೇನು ಮಹಾ! ನಾನು ಇಪ್ಪತ್ತು ಹೋಳಿಗೆ ತಿಂತೀನಿ!'' ಎಂದ ಗುಂಡಣ್ಣ. ಪೈಲ್ವಾನ್ ವರದಪ್ಪನಿಗೆ ಕೋಪಬಂತು

''ನೀನು ಇಪ್ಪತ್ತು ಹೋಳಿಗೆ ತಿಂದರೆ ನೂರು ರೂಪಾಯಿ ಕೊಡ್ತೀನಿ'' ಎಂದ.

''ಜುಜುಬಿ ನೂರು ಯಾರಿಗೆ ಬೇಕು, ಐನೂರು ಕೊಡ್ತೀಯ ಬೇಕಾದ್ರೆ ಮೂವತ್ತು ಹೋಳಿಗೆ ತಿಂತೀನಿ'' ಎಂದ ಗುಂಡಣ್ಣ ವರದಪ್ಪನಿಗೆ ರೇಗಿ ಹೋಯಿತು.

''ನೀನು ಮೂವತ್ತು ಹೋಳಿಗೆ ತಿಂದರೆ ಐನೂರು ಕೊಡ್ತೀನಿ''

''ಅಷ್ಟೇ ಅಲ್ಲ ಅದನ್ನು ತಯಾರಿಸಲು ಆಗುವ ಖರ್ಚು ಕೊಡಬೇಕು''

''ಸೋತರೆ ನೀನು ಕೊಡಬೇಕು''

''ಸರಿ''

''ಸರಿ''

ವರದಪ್ಪನ ಚೇಲಾಗಳು ಅಡಿಗೆ ಮನೆಗೆ ಹೋಗಿ ಅಡಿಗೆ ಭಟ್ಟರನ್ನು ಕರೆತಂದರು

ಅಲ್ಲೇ ಮಾತುಕತೆಯಾಗಿ ಅಡಿಗೆ ಭಟ್ಟರು ಮದುವೆ ಖರ್ಚಿಗೆ ಸೇರಿಸದೆ ಐವತ್ತು ಹೋಳಿಗೆಗಳನ್ನು ಮಾಡುವ ಏರ್ಪಾಡಾಯಿತು.

ಬೆಳಿಗ್ಗೆ ನಮಗೆಲ್ಲಾ ಕುತೂಹಲ. ನಾವೆಲ್ಲಾ ಟಿಫನ್ನಿಗೆ ಕುಳಿತೆವು 'ಇಡ್ಲಿವಡೆ ಸಾಂಬಾರ್' 'ಪೊಂಗಲ್' ಸೇವೆ ನಡೆಯಿತು. ಗುಂಡಣ್ಣ ನನ್ನ ಪಕ್ಕ ಕುಳಿತಿದ್ದ. ನಮ್ಮ ಎದುರು ಸಾಲಿನಲ್ಲಿ ಕಳಿತಿದ್ದ ವರದಪ್ಪ ''ಭಟ್ಟರೇ ಹೋಳಿಗೆ ಬರಲಿ ಎಂದ'' ಭಟ್ಟರು ತಟ್ಟೆತುಂಬ ಹೋಳಿಗೆತಂದರು. ನಮ್ಮ ತಟ್ಟೆಗಳಿಗೂ ಎರಡೆರಡು ಹೋಳಿಗೆಗಳು ಬಂದವು. ಭಟ್ಟರ ಶಿಷ್ಯ ಬಟ್ಟಲಿನಲ್ಲಿ ಬಿಸಿ ಬಿಸಿ ಕಾಯಿಸಿದ ತುಪ್ಪ ಹಿಡಿದು ಬಂದ. ನಾವು ಎರಡು ಹೋಳಿಗೆ ತಿನ್ನುವ ವೇಳೆಗೆ ಸುಸ್ತಾದೆವು. ಗುಂಡಣ್ಣನ ತಟ್ಟೆಗೆ ಒಂದರಮೇಲೊಂದು ಹೋಳಿಗೆಗಳು ಬೀಳತೊಡಗಿದವು, ಹಿಂದೆಯೇ ತುಪ್ಪದ ಸರಬರಾಜು. ಒಂದು-ಎರಡು-ಮೂರು.... ಮೂವತ್ತು ಹೋಳಿಗೆಗಳನ್ನು ತಿಂದು, ಒಂದು ತಂಬಿಗೆ ನೀರು ಕುಡಿದು. ''ಸಾಕು ಭಟ್ಟರೇ... ಮಧ್ಯಾಹ್ನ ಮದುವೆ ಊಟ ಮಾಡಬೇಕು'' ಎಂದು ನಿಲ್ಲಿಸಿದ. ಭಟ್ಟರು ಗುಂಡಣ್ಣನಿಗೆ ಕೈಮುಗಿದು ''ನೀನು ನೂರುವರ್ಷ ಬದುಕಪ್ಪ. ನನಗೆ ಈ ದಿನ ವಾಯುಪುತ್ರ ಭೀಮಸೇನರ ದರ್ಶನವಾಯ್ತು'' ಎಂದು ಕಣ್ಣೀರಿಟ್ಟರು. ವರದಪ್ಪ ಐದು ಹಸಿರು ನೋಟುಗಳನ್ನು ಗುಂಡಣ್ಣನ ಮುಂದೆ ಹಾಕಿ, ದುರ್ದಾನ ಪಡೆದವನಂತೆ ತಲೆಮೇಲೆ ಟವಲು ಹಾಕಿಕೊಂಡು ಮದುವೆಮನೆ ಜನಜಂಗುಳಿ ಮಧ್ಯೆಸೇರಿಕೊಂಡ.

★★★

ನಾನು ಗುಂಡಣ್ಣ ಒಂದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡ್ತಿದ್ದೆವು. ಅವನು ಡಿಸ್ಪಾಚ್‌ಸೆಕ್ಷನ್‌ನಲ್ಲಿ ಕೆಲಸಮಾಡ್ತಿದ್ದ. ನಾನು ಗುಣಮಟ್ಟ ವಿಭಾಗದಲ್ಲಿ ಕೆಲಸಮಾಡ್ತಿದ್ದೆ. ಮಧ್ಯಾಹ್ನ ಊಟವಾದ ಮೇಲೆ ಸ್ವಲ್ಪ ಹೊತ್ತು ಹೊರಗೆ ವಾಕಿಂಗ್ ಹೋಗುತ್ತಿದ್ದೆವು ನಾನು ಮತ್ತು ನನ್ನ ಗೆಳೆಯರು, ಗುಂಡಣ್ಣನ್ನೂ ಒಂದೊಂದು ದಿನ ನಮ್ಮ ಜೊತೆ ಸೇರಿಕೊಳ್ಳುತ್ತಿದ್ದನು.

ಚಂದ್ರಗ್ರಹಣದ ದಿನ. ಮಧ್ಯಾಹ್ನ ಏನೂ ತಿನ್ನಬಾರದು, ಬರೀ ಹೊಟ್ಟೆಯಲ್ಲಿ ಇರಬೇಕು ಅಂತ ಶಾಸ್ತ್ರ. ಆಚಾರವಂತರ ಮನೆತನಕ್ಕೆ ಸೇರಿದವರಾದ ನಾವು ಊಟಮಾಡಲುಸಾಧ್ಯವೇ? ಅಂದು ಊಟಮಾಡಲಿಲ್ಲ. ಎಂದಿನಂತೆಹೊರಗೆವಾಕಿಂಗ್ ಹೊರಟೆವು. ಆದಿನ ಗುಂಡಣ್ಣ ನಮ್ಮ ಜೊತೆ ಸೇರಿಕೊಂಡ. ಅಂಗಡಿ ಬೀದೀಲಿ ಹೋಗುವಾಗಹೊಸದಾಗಿತಂದಿಟ್ಟಿದ್ದ ಬಾಳೆಹಣ್ಣಿನಗೊನೆಅಂಗಡೀಲಿನೇತಾಡುತ್ತಿತ್ತು. ನಂಜನಗೂಡು ರಸಬಾಳೆಸುವರ್ಣ ಬಣ್ಣದಿಂದಸೂರ್ಯನಬೆಳಕಿಗೆ ಹೊಳೆಯುತ್ತಿತ್ತು. ಯಾಕೋ ಏನೋ ನಮಗೇ ತಿಳಿಯದೆ ಬಾಯಲ್ಲಿ ನೀರೂರಿತು. ಚಿಟ್‌ಫಂಡ್ ದಂದೆಯಲ್ಲಿ ಹಣದ ಹೊಳೆ ನೋಡಿ ಮನಸ್ಸು ಕರಗಿ, ಕೈ ಮಾಡಬಾರದ ಕೆಲಸ ಮಾಡುವಂತೆ, ಆಚಾರ ಗಾಳಿ ಪಾಲಾಗುವುದಲ್ಲ ವ್ಯಥೆ!

ನಮ್ಮ ಗುಂಪಿನಲ್ಲಿ ಸುಬ್ಬಣ್ಣ ಹೆಚ್ಚು ಸಂಪ್ರದಾಯಸ್ತ. ಅವನ ದೊಡ್ಡಪ್ಪನ ಮಗ ಯಾವುದೋ ಮಠದಲ್ಲಿ ದೊಡ್ಡ ಗುರು ಆಗಿದ್ದ. ಮಠದ ಶಾಖೆ ಬೆಂಗಳೂರಿನಲ್ಲಿತ್ತು.

ಪ್ರತಿ ಏಕಾದಶಿ, ದ್ವಾದಶಿ, ಹರಿದಿನ, ಹಬ್ಬದ ದಿನಗಳು, ಗ್ರಹಣದ ಮಾರನೆ ದಿನ, ಹೀಗೆ ವಿಶೇಷ ದಿನಗಳಲ್ಲಿ ಅವನು ಸಂಸಾರ ಸಮೇತ ಮಠಕ್ಕೆ ಹೋಗ್ತಿದ್ದ ಅಲ್ಲೇ ಊಟ- ಪ್ರಸಾದ ನಡೀತಿತ್ತು. ತಿಂಗಳಲ್ಲಿ ಅರ್ಧ ಸಂಬಳ ಉಳಿತಾಯ ಆಗ್ತಿತ್ತು. ಮಡಿ- ಆಚಾರ- ವಿಚಾರಗಳಲ್ಲಿ ಅವನ ಮಾತೇ ನಮಗೆ ವೇದವಾಕ್ಯ.

ಸುಬ್ಬಣ್ಣ ವೇದಘೋಷದಂತೆ ಹೇಳಿದ

''ಬಾಳೆಹಣ್ಣು ತಿಂದರೆ ದೋಷವಿಲ್ಲ!'' ಅವನ ಮಾತು ಮುಗಿಯುವುದರೊಳಗೆ ನಾವು ಬಾಳೆಹಣ್ಣು ಅಂಗಡಿಗೆ ಧಾಳಿಯಿಟ್ಟೆವು. ಅವರವರ ಚೈತನ್ಯ. ಎರಡು ಮೂರು ಹಣ್ಣು ತಿಂದೆವು. ಎಳೆನೀರು ದೋಷವಿಲ್ಲ ಸುಬ್ಬಣ್ಣ ಹೇಳಿದ. ಒಂದು ಗೊನೆ ಎಳನೀರು ಅಂಗಡಿಯಲ್ಲಿ ಖಾಲಿಯಾಯಿತು.

''ನಾನು ಮಠದ ಊಟ ಮಾಡೋನು. ಅದಕ್ಕೇ ನಾನು ನಾಲ್ಕು ರಸಬಾಳೆ ಹಣ್ಣು ತಿಂದೆ ನೀವೆಲ್ಲಾ ಒಂದು- ಎರಡಕ್ಕೇ ಸುಸ್ತು! ಗಹಗಹಿಸಿ ನಕ್ಕ ಸುಬ್ಬಣ್ಣ.

ನಾಲ್ಕು ಹಣ್ಣುಗಳೇನು ಮಹಾ! ನಲವತ್ತು ಹಣ್ಣುಗಳನ್ನು ತಿನ್ನಬಹುದು!'' ಎಂದ ಗುಂಡಣ್ಣ ಗಂಭೀರವಾಗಿ. ಸುಬ್ಬಣ್ಣನಿಗೆ ರೇಗಿತು.

''ಇದು ಗುಂಡಾಪಂತ್‌ಬೀದಿ ಹೋಟೆಲಿನ ಇಡ್ಲಿಸಾಂಬಾರ್ ಅಲ್ಲ ತಿನ್ನೋಕೆ, ಇದು ನಂಜನಗೂಡು ರಸಬಾಳೆ''

''ಕಾಣ್ತಿದೆಯಲ್ಲ - ಐನೂರು ಕೊಡ್ತೀಯ ಐವತ್ತು ಹಣ್ಣು ತಿಂತೀನಿ....''

ಜೇಬಿನಲ್ಲಿ ಬೋನಸ್ ಹಣವಿತ್ತು. ಇಬ್ಬರೂ ಐನೂರು ರೂಪಾಯಿ ತೆಗೆದು ನನ್ನ ಕೈಗೆ ಕೊಟ್ಟರು. ಗೊನೆಯಿಂದ ಒಂದೊಂದು ಹಣ್ಣು ಕಿತ್ತುಕೊಂಡು ತಿಂದು ಸಿಪ್ಪೆಯನ್ನು ಸುಬ್ಬಣ್ಣನ ಮುಂದೆ ಹಾಕತೊಡಗಿದ ಗುಂಡಣ್ಣ. ನಮ್ಮ ಗುಂಪಿನಲ್ಲೆಲ್ಲಾ ಜೂನಿಯರ್ ಹನುಮಂತರಾಯ ಸಿಪ್ಪೆಗಳನ್ನು ಎಣಿಸತೊಡಗಿದ, ಒಂದು - ಎರಡು - ಮೂರು ಎಣಿಸತೊಡಗಿದ. ಐವತ್ತು ದಾಟಿ ಗೊನೆ ಖಾಲಿಯಾಯಿತು. ಈಗಾಗಲೇ ನಾವು ಬೇರೆ ಒಂದಷ್ಟು ಹಣ್ಣುಗಳನ್ನು ಮುಗಿಸಿದ್ದೆವು. ಬೇರೆ ದಾರಿಯಿಲ್ಲದೆ ಗುಂಡಣ್ಣನ ಜೇಬಿಗೆ ತುರುಕಿದೆ. ಬೇಲಿನ ಮೇಲೆ ಬಿಡುಗಡೆಯಾದ ಲಲ್ಲೂಪ್ರಸಾದ್ ಯಾದವ್‌ನಂತೆ, ಷೀಟಿ ಹಾಕುತ್ತಾ ಬೀಡಾ ಅಂಗಡೀಲಿ ನಾಲ್ಕು ಬೀಡ ಕೊಂಡು ಹೊರಟ. ಒಂದು ತಿಂಗಳು ಮಠದ ಊಟ ಕಳೆದುಕೊಂಡವನಂತೆ ಸುಬ್ಬಣ್ಣ, ಕಾಂಗ್ರೆಸ್ ಬೆಂಬಲ ಕಳೆದುಕೊಂಡು ಪದವಿ ಕಳೆದುಕೊಂಡ ಗುಜ್ರಾಲ್‌ರಂತೆ ಸೋತ ಮುಖದೊಡನೆ ಹೊರಟ.

'ಬಾಳೆ ಹಣ್ಣು ದುಡ್ಡುಕೊಡಿ' ಅಂಗಡಿಯವನು ನನ್ನನ್ನು ಹಿಡಿದುಕೊಂಡ. ನಾನು ಹಣತೆತ್ತು, ಲೈಟಿಲ್ಲದ ಸೈಕಲ್ ಸವಾರ ಪೋಲಿಸ್ ಪೇದೆಗೆ ಹಣತೆತ್ತು ಹೊರಟಂತೆ, ಫ್ಯಾಕ್ಟರಿ ಕಡೆ ಹೊರಟೆ.

★★★

ನಮ್ಮ ಕಂಪೆನಿಯ ಕಲಾಸಂಘದಿಂದ ಆಗಾಗ್ಗೆ ಒಳ್ಳೆಯ ನಾಟಕಗಳನ್ನ ಆಡಿ, ಜನರ

ಮೆಚ್ಚುಗೆಗೆ ಪಾತ್ರರಾಗಿದ್ದೇವೆ. ನಮ್ಮ ಕಲಾ ತಂಡಕ್ಕೆ ಬೆಂಗಳೂರಿನಲ್ಲಿ ಮಾತ್ರವಲ್ಲ ಇಡೀ ಕರ್ನಾಟಕದಲ್ಲಿ ಒಳ್ಳೆಯ ಹೆಸರು. ನಮ್ಮ ತಂಡದ ಕಲಾವಿದರೂ ಅಷ್ಟೇ ಶಿಸ್ತಿನ ಸಿಪಾಯಿಗಳು, ರಿಹರ್ಸಲ್‌ಗೆ ತಪ್ಪದೆ ಬರುತ್ತಿದ್ದರು ತಮ್ಮ ಪಾತ್ರ ಸರಿಯಾಗಿ ಬರುವವರೆಗೆ ಮೇಲಿಂದ ಮೇಲೆ ಅಭ್ಯಾಸ ನಡೆಸಿ ನಂತರ ಮನೆಗೆ ಹೋಗುತ್ತಿದ್ದರು. ಒಮ್ಮೊಮ್ಮೆ ರಾತ್ರಿ ಹನ್ನೆರಡಾಗುತ್ತಿತ್ತು ಪ್ರತಿಯೊಬ್ಬರೂ ನುರಿತ ಕಲಾವಿದರು. ನಮ್ಮ ತಂಡಕ್ಕೆ ಸೇರುವ ಮೊದಲು ಬಿ.ವಿ. ಕಾರಂತ, ಟಿ.ಎಸ್. ನಾಗಾಭರಣ, ಚಂದ್ರಶೇಖರ್, ಪ್ರಸನ್ನ, ಶ್ರೀರಂಗ ಪರ್ವತವಾಣಿ, ಮೊದಲಾದ ನಾಟಕರಂಗದ ಧೀಮಂತ ಧುರೀಣರ ತಂಡಗಳಲ್ಲಿ ಪಾತ್ರವಹಿಸಿದವರು. ಹೀಗಾಗಿ ನಾವು ಪ್ರದರ್ಶಿಸುವ ನಾಟಕಗಳು ತುಂಬ ಜನಪ್ರಿಯವಾಗಿದ್ದವು. ಜೋಗ್‌ಫಾಲ್ಸ್ ಮಿತ್ರಮಂಡಳಿ ಭದ್ರಾವತಿ ಕರ್ನಾಟಕ ನಾಟಕ ಮಂಡಳಿ, ತುಮಕೂರು ಕನ್ನಡ ಮಿತ್ರಸಂಘ ಹುಬ್ಬಳ್ಳಿ ಕನ್ನಡ ಬಳಗ, ಹೀಗೆ ಹಲವು ಹತ್ತಾರು ಕಡೆ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರಥಮ ಪಾರಿತೋಷಕಗಳನ್ನು ಗಳಿಸಿದ್ದೆವು. ಉತ್ತಮ ನಿರ್ದೇಶನ, ಉತ್ತಮ ನಟ, ಉತ್ತಮ ರಂಗಸಜ್ಜಿಕೆ, ಉತ್ತಮ ಬೆಳಕು ವಿನ್ಯಾಸ ಹೀಗೆ ಪ್ರಶಸ್ತಿಗಳ ಸರಮಾಲೆ ನಮ್ಮದಾಗಿತ್ತು. ನಾನೇ ತಂಡದ ನಾಯಕ ಮತ್ತು ನಿರ್ದೇಶಕ. ಗುಂಡಣ್ಣ ಯಾವುದೇ ನಾಟಕದ ಮುಖ್ಯ ಪಾತ್ರಧಾರಿ ಅಥವಾ ಹೀರೋ.

ನಮ್ಮ ತಂಡ ಜೋಗ್‌ಫಾಲ್ಸ್‌ಗೆ ಹೋಗಿತ್ತು. ದಾರಿಯಲ್ಲಿ ಶಿರಸಿ ಸಿಕ್ಕಿದಾಗ ಸೋದೆ ವಾದಿರಾಜರ ಮಠಕ್ಕೆ ಹೋಗಿ ಸ್ವಾಮಿಗಳ ದರ್ಶನ ಮಾಡಿಕೊಂಡು ಜೋಗ್‌ಫಾಲ್ಸ್‌ಗೆ ಹೋದೆವು. ನಮ್ಮ ನಾಟಕ ಮಾರನೆಯ ದಿನ ಇತ್ತು. ನಾವು ಒಂದು ದಿನ ಮುಂಚಿತವಾಗಿ ಹೊರಟಿದ್ದೆವು. ಸ್ಥಳ ಪರಿಚಯ, ರಂಗ ವೇದಿಕೆಯಲ್ಲಿ ದೊರಕುವ ಅನುಕೂಲಗಳು ನಾವು ಮಾಡಿಕೊಳ್ಳಬೇಕಾದ ಏರ್ಪಾಡುಗಳು, ಪ್ರೇಕ್ಷಕರ ರುಚಿ, ಉಳಿದ ತಂಡದವರು ಯಾವ ಮಟ್ಟದಲ್ಲಿದ್ದಾರೆ. ತೀರ್ಪುಗಾರರು ಹೇಗೆ - ಇಲ್ಲೇನಾದರೂ ರಾಜಕೀಯ ಇದೆಯೇ? ಹೀಗೆ ಹತ್ತು ಹಲವಾರು ವಿಷಯ ಸಂಗ್ರಹಣೆಗಾಗಿ ನಾವು ಯಾವಾಗಲೂ ಒಂದೆರಡು ದಿನ ಮುಂಚಿತವಾಗಿ ನಾವು ನಾಟಕವಾಡುವ ಸ್ಥಳಕ್ಕೆ ಹೋಗುತ್ತಿದ್ದೆವು. ನಾಟಕದ ಹಿಂದಿನ ರಾತ್ರಿ ಮತ್ತು ನಾಟಕದ ದಿನ ಸಂಸ್ಥೆಯವರು ಉಚಿತ- ಊಟ ವಸತಿ ವ್ಯವಸ್ಥೆ ಮಾಡುತ್ತಿದ್ದರು. ನಾವು ಮುಂಚಿತವಾಗಿ ಹೋಗಿದ್ದ ಕಾರಣ ಮತ್ತು ನಮ್ಮ ನಾಟಕದ ಅಭ್ಯಾಸ ಇತರರಿಗೆ ತಿಳಿಯಬಾರದೆಂದು ಒಂದು ಮನೆ ನಾಲ್ಕು ದಿನ ಬಾಡಿಗೆಗೆ ಹಿಡಿದೆವು. ಒಬ್ಬ ಬ್ರಹ್ಮಚಾರಿ ಇಂಜಿನಿಯರ್ ನಮಗೆ ಅವರ ಮನೆಬಿಟ್ಟುಕೊಟ್ಟು ಅವರು ನಾಲ್ಕು ದಿನ ಬೆಂಗಳೂರಿಗೆ ಹೋದರು. ಮಧ್ಯಾಹ್ನ ಎರಡು ಗಂಟೆಯಾಯಿತು. ಎಲ್ಲರಿಗೂ ಹಸಿವು ಊಟದ ಹೋಟೆಲ್ ಹುಡುಕಿಕೊಂಡು ಹೊರಟೆವು ಆ ಊರಿಗೆಲ್ಲ ಇದ್ದದ್ದು ಒಂದೇ ಹೋಟೆಲ್, ಸಣ್ಣ ಹೋಟೆಲ್ ಮಂಗಳೂರು ಬ್ರಾಹ್ಮಣರ ಖಾನಾವಳಿ ಹೊರಗೆ ದೊಡ್ಡದಾಗಿ 'ಪೂರ್ತಿ ಊಟ' 'ಭೋಜನ ರೆಡಿಯಾಗಿದೆ' ಬೋರ್ಡುಗಳು ಕಾಣಿಸಿದವು. ನಾನು ತಂಡದ ಮ್ಯಾನೇಜರ್ ಆದ ಕಾರಣ ಕೌಂಟರಿಗೆ ಹೋಗಿ ಎಲ್ಲರಿಗೂ ಊಟದ ಟಿಕೆಟ್ ತೆಗೆದುಕೊಂಡೆ. ನಾವು ಕ್ರಿಕೆಟ್ ಟೀಮಿನಂತೆ ಹನ್ನೊಂದು ಜನ ಇದ್ದೆವು. ಹೋಟೆಲ್

ಯಜಮಾನ ನಮ್ಮನ್ನು ಅಡಿಗೆ ಮನೆ ಪಕ್ಕದಲ್ಲಿದ್ದ ತರಕಾರಿ ಹಚ್ಚುವ ಕೊಠಡಿಯಲ್ಲಿ ಸ್ಥಳಮಾಡಿ, ಚಾಪೆಹಾಸಿ; ಬಾಳೆ ಎಲೆ ಹಾಕಿ ಕೂರಿಸಿದ. ಚೆನ್ನಾಗಿ ಹಸಿದಿದ್ದ ನಾವು ರುಚಿಯಾಗಿದ್ದ ಊಟದ ಮೇಲೆ ಧಾಳಿ ಆರಂಭಿಸಿದೆವು.

ಸಪ್ಲೈಯರ್ ಪಂಕ್ತಿಯ ಮೊದಲಲ್ಲಿದ್ದ ಗುಂಡಣ್ಣನಿಗೆ ಬಡಿಸಿ ಸಾಲಾಗಿ ಕುಳಿತಿದ್ದ ನಮಗೆಲ್ಲಾ ಬಡಿಸಿ ಮುಗಿಸುವುದರೊಳಗೆ ಗುಂಡಣ್ಣನ ಎಲೆ ಖಾಯಿಯಿರುತ್ತಿತ್ತು ಮತ್ತೆ ಅನ್ನ-ಹುಳಿ ಕೇಳುತ್ತಿದ್ದ. ಜೊತೆಗೆ ಮೇಲೋಗರ ಉಪ್ಪಿನಕಾಯಿ, ಚಟ್ನಿ ಹಪ್ಪಳ, ಫಲ್ಯ, ಕೂಟು ಕೇಳುತ್ತಿದ್ದ. ನಮ್ಮ ಊಟ ಮುಗಿವ ಹಂತಕ್ಕೆ ಬಂದು ಮಜ್ಜಿಗೆ ಬಡಿಸಿದ ಸಪ್ಲೈಯರ್ ಆದರೆ ಗುಂಡಣ್ಣ ಇನ್ನೂ ಅನ್ನ-ಹುಳಿ ಹಾಕಿಸಿಕೊಳ್ಳುತ್ತಿದ್ದ. ನಾವು ಊಟ ಮುಗಿಸಿ ಕೈ ತೊಳೆದು ಫ್ಯಾನ್ ಕೆಳಗೆ ಕುಳಿತು ಸುಧಾರಿಸಿಕೊಳ್ಳುತ್ತಿದ್ದೆವು. ಗುಂಡಣ್ಣನ ಊಟ ಮುಗೀಲಿಲ್ಲ. 'ಅನ್ನ-ಹುಳಿ' ಸಪ್ಲೈ ಆಗುತ್ತಲೇ ಇತ್ತು. ಕೊನೆಗೊಮ್ಮೆ ಸಪ್ಲೈಯರ್ ಗಲ್ಲಮೇಲೆ ಕುಳಿತಿದ್ದ ಯಜಮಾನನ ಬಳಿಗೆ ಹೋಗಿ ಕಿವಿಯಲ್ಲಿ ಏನೋ ಪಿಸುಗುಟ್ಟಿದ. ಯಜಮಾನ ಓಡಿಬಂದ. ಗುಂಡಣ್ಣನ ಪಕ್ಕ ಕುಳಿತು ಬೀಸಣಿಗೆಯಿಂದ ಗಾಳಿ ಹಾಕತೊಡಗಿದ ''ಸಾವಕಾಶವಾಗಿ ಊಟಮಾಡಲಿ'' ಎಂದ ಹೋಟೆಲ್ ಮಾಲೀಕ ''ಫುಲ್‌ಮೀಲ್ಸ್'' ಅಂತ ಊಟದ ಚೀಟಿ ತೋರಿಸಿದ ಗುಂಡಣ್ಣ.

''ಲೋ ಮಾಣಿ ಅಡಿಗೆ ಭಟ್ಟರಿಗೆ ಹೇಳಿ ಇನ್ನೊಂದು ಸೇರು ಅಕ್ಕಿ ಬೇಯಿಸಲು ಹೇಳು. ಹೊರಗಡೆ 'ಊಟ ಮುಗಿದಿದೆ' ಬೋರ್ಡು ಹಾಕು'' ಎಂದು ಆಜ್ಞಾಪಿಸಿದ ಮಾಲೀಕ.

ಮತ್ತೆ ಬಿಸಿಬಿಸಿ ಊಟ ಗುಂಡಣ್ಣನಿಗೆ ಬಡಿಸಲಾಯಿತು. ಕೊನೆಗೂ ಗುಂಡಣ್ಣ ಊಟ ಮುಗಿಸಿದ. ಅವನು ಕೈತೊಳೆದು ಬರುತ್ತಿದ್ದಂತೆ ಹೋಟೆಲ್ ಮಾಲೀಕ ಮತ್ತು ಮಾಣಿ, ಅಡಿಗೆ ಭಟ್ಟರು ಗುಂಡಣ್ಣನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮತ್ತೆ ಎದ್ದು ಕೈಕಟ್ಟಿಕೊಂಡು ನಾವು ಯಾರು? ಎಲ್ಲಿಂದ ಬಂದಿದ್ದೇವೆ? ಯಾತಕ್ಕಾಗಿ ಬಂದಿದ್ದೇವೆ? ಎಲ್ಲ ತಿಳಿದುಕೊಂಡರು ತಾವು ನಮ್ಮ ನಾಟಕ ನೋಡಲು ಬರುವುದಾಗಿ ತಿಳಿಸಿದರು. ನಾನು ಮಾಲೀಕರ ಬಳಿ ಹೋಗಿ ''ಎಷ್ಟು ಎಕ್‌ಸ್ಟ್ರಾ ಬಿಲ್ ಆಯಿತು? ಹೇಳಿ ಕೊಡ್ತೀನಿ'' ಅಂದೆ.

''ಎಲ್ಲಾದರೂ ಉಂಟೆ ನಾನು ನಲವತ್ತು ವರ್ಷದಿಂದ ಖಾನಾವಳಿ ನಡೆಸ್ತಿದ್ದೀನಿ ಈ ರಾಯರ ಹಾಗೆ ನೋಡಲಿಲ್ಲ. ನಮಗೆ ತುಂಬ ಸಂತೋಷವಾಗಿದೆ. ದೇವರು ಇವರನ್ನ ಸುಭಿಕ್ಷವಾಗಿಟ್ಟಿರಲಿ'' ಎಂದು ಕೈ ಎತ್ತಿ ಹಾರೈಸಿದರು.

ಮಾರನೆ ದಿನ ಹೋಟೆಲಿನ ಮುಂದೆ 'ಪೂರ್ತಿ ಊಟ' ಬೋರ್ಡ್‌ನ್ನು ತೆಗೆಯಲಾಗಿತ್ತು. 'ಪ್ಲೇಟ್ ಮೀಲ್ಸ್' ಬೋರ್ಡ್ ಹಾಕಲಾಗಿತ್ತು ದೂರದಿಂದ ನಮ್ಮನ್ನು ನೋಡಿದ ಮಾಲೀಕ ಹೋಟೆಲ್ ಬಾಗಿಲು ಮುಚ್ಚಿಸಿ 'ಈ ದಿನ ರಜೆ' ಬೋರ್ಡ್ ಹಾಕಿಸಿದ.

ಪಾತ್ರೆ-ಅಕ್ಕಿ, ಬೇಳೆ, ಸಾಮಾನುಗಳನ್ನು ಕೊಂಡುಕೊಂಡು ನಾವೇ ಅಡಿಗೆ

ಮಾಡಿಕೊಳ್ಳತೊಡಗಿದೆವು. ಗುಂಡಣ್ಣನೇ ಅಡಿಗೆ ಭಟ್ಟ.

ನಾಟಕದ ದಿನ ವೇದಿಕೆಯ ಮುಂದಿನ ಸಾಲಿನಲ್ಲಿ, ಹೋಟೆಲ್ ಮಾಲೀಕ ಅವನ ಪರಿವಾರ ಕುಳಿತಿತ್ತು. ಗುಂಡಣ್ಣ ವೇದಿಯ ಮೇಲೆ ಬಂದಾಗ, ಹೋಟೆಲ್ ಮಾಲೀಕ ದೊಡ್ಡ ಹೂವಿನ ಹಾರ ತಂದು ಹಾಕಿದ.

★★★

ನಾವು ಕಾಲೇಜಿನಲ್ಲಿ ಓದುತ್ತಿದ್ದ ಕಾಲ. ಜಿ.ಪಿ. ರಾಜರತ್ನಂ ನಮ್ಮ ಗುರುಗಳು ನಾವು ಅವರ ಖಾಸಾ ಶಿಷ್ಯರಾಗಿದ್ದೆವು. ಒಂದು ದಿನ ಸಂಜೆ ಏಳು ಘಂಟೆಗೆ ಮಲ್ಲೇಶ್ವರದ ಗಾಂಧಿಭವನದಲ್ಲಿ ಅವರ ಉಪನ್ಯಾಸ ಕಾರ್ಯಕ್ರಮವಿತ್ತು 'ಭರತ-ಬಾಹುಬಲಿ' ವಿಷಯ ನಮಗೆ ಭರತೇಶ ವೈಭವ ಪಾಠವಿತ್ತು ಇವರ ಉಪನ್ಯಾಸ ಕೇಳಿದರೆ ಪಾಠ ಚೆನ್ನಾಗಿ ಅರ್ಥವಾಗಬಹುದು ಎಂದು ತೀರ್ಮಾನಿಸಿದೆವು. ಆ ಸಂಜೆ ಅವರು ಸೆಂಟ್ರಲ್ ಕಾಲೇಜಿನಿಂದ ಹೊರಟಾಗ ನಾವು ಅವರನ್ನು ಹಿಂಬಾಲಿಸಿದೆವು. ಅವರಿಗೆ ತಿಳಿಯದಂತೆ ಸ್ವಲ್ಪ ದೂರದಲ್ಲಿದ್ದೆವು.

ಕಾಲೇಜಿನಿಂದ ನಡೆದುಕೊಂಡು ಹೊರಟವರು ವಸಂತ್ ವಿಹಾರ್‌ನಲ್ಲಿ ಒಂದು ಮಸಾಲೆ ತಿಂದರು. ನಾವು ಬರೇ ಟೇಬಲಿನಲ್ಲಿ ಕುಳಿತು ಕಾಫಿ ಕುಡಿದೆವು. ಅಲ್ಲಿಂದ ಹೊರಟವರು ಬಳೇಪೇಟೆಗೆ ಬಂದರು. ಸೆಕೆಂಟ್ ಹ್ಯಾಂಡ್ ಬುಕ್‌ಸ್ಟಾಲ್‌ಗಳಲ್ಲಿ ಪುಸ್ತಕಗಳನ್ನು ನೋಡಿದರು. ಒಂದೆರಡು ಪುಸ್ತಕಕೊಂಡರು. ಅಲ್ಲಿಂದ ಮಲಬಾರ್ ಲಾಡ್ಜ್ ಹೋಟೆಲಿಗೆ ಹೋಗಿ ಮಸಾಲೆ ದೋಸೆ ತಿಂದರು. ನಾವೂ ಮಸಾಲೆ ದೋಸೆ ತಿಂದೆವು. ದೋಸೆತಿಂದಾದ ಮೇಲೆ ಸಿಟಿಸರ್ಕುಲೇಟಿಂಗ್ ಲೈಬ್ರರಿಗೆ ಹೋಗಿ, ಅಲ್ಲಿಂದ ಗೀತ ಏಜೆನ್ಸೀಸ್ ಹೋಗಿ ಬಂದರು. ಬರುವಾಗ ಉಡುಪಿ ಕೃಷ್ಣಭವನ್‌ನಲ್ಲಿ ಮಸಾಲೆ ದೋಸೆ ತಿಂದರು ನೇರವಾಗಿ ಮಲ್ಲೇಶ್ವಕ್ಕೆ ಬಂದರು. ಅವರ ಮನೆಗೆ ಹೋಗಿ ಸ್ವಲ್ಪ ಹೊತ್ತಾದ ನಂತರ ಬರುವಾಗ ಮಿಲ್‌ಕಾರ್ನರ್ 'ಕೃಷ್ಣಭವನ್'ನಲ್ಲಿ ಮಸಾಲೆ ದೋಸೆ ತಿಂದು, ಗಾಂಧಿಭವನಕ್ಕೆ ಬಂದರು. ಉಪನ್ಯಾಸ ಅಮೋಘವಾಗಿತ್ತು.

ಮಾರನೇದಿನ ಕಾಲೇಜಿನಲ್ಲಿ ನಮ್ಮನ್ನು ಕರೆದರು.

''ಅಲ್ರಯ್ಯನಿನ್ನೆನನ್ನಹಿಂದ್ಯಾಕೆಬಿದ್ರಿ'' ಎಂದು ಕೇಳಿದರು. ನಾವುತಪ್ಪೊಪ್ಪಿಕೊಂಡು ಕ್ಷಮೆ ಕೇಳಿದೆವು.

''ಅಯ್ಯೋ ಮುಂಡೇವ ನಾನು ಈ ವಯಸ್ಸಿನಲ್ಲಿ ತಿಂತೀನಿ ತಿಂದು ಜೀರ್ಣಮಾಡ್ಕೋತೀನಿ. ನನಗೆ ಜೀರ್ಣಶಕ್ತಿ ಮಾತ್ರವಲ್ಲ ಬುದ್ಧಿಶಕ್ತಿನೂ ಇದೆ. ನಿಮಗೆ ಎರಡೂ ಇಲ್ವಲ್ಲ. ನಿನ್ನೆ ನೋಡಿದ್ನಲ್ಲ. ಮಲಬಾರ್ ಲಾಡ್ಜ್‌ನಲ್ಲಿ ಒಂದೊಂದು ದೋಸೆ ತಿಂದ್ರಿ ಅಷ್ಟೇ ಅಲ್ಲಿಗೆ ಮುಗೀತಲ್ಲ. ಉಪನ್ಯಾಸ ಕೇಳಿದ್ರಲ್ಲ. ವಿಷಯ ಏನಾದ್ರೂ ತಲೇಗೆ ಹೋಯ್ತೋ?'' ಎಂದು ಗದರಿಸಿದರು ನಾವು ಪಲಾಯನ ಮಾಡಿದೆವು.

★★★

ನಾನು ಗುಂಡಣ್ಣನ ಒಂದು ದಿನ ಕೇಳಿದೆ. ಅವನು ಒಳ್ಳೆಯ ಮೂಡಿನಲ್ಲಿದ್ದ.

''ಒಂದೊಂದ್ಸಲ ಅಷ್ಟೊಂದು ತಿಂತೀಯಲ್ಲ ಅದು ಹ್ಯಾಗೆ ಜೀರ್ಣ ಮಾಡಿಕೊಳ್ತೀಯ?'' ಎಂದೆ ಆಶ್ಚರ್ಯ ಸೂಚಿಸುತ್ತಾ.

ಅವನು ನನ್ನನ್ನ ಅವನ ಮನೆಗೆ ಕರೆದೊಯ್ದ. ಅವನ ಮನೆ ಮುಂದೆ ಜನ ನಿಂತಿದ್ದರು. ದೊಡ್ಡದಾದ ಬೋರ್ಡು ಕಾಣಿಸ್ತು 'ಆಯುರ್ವೇದ ಸದ್ವೈದ ಶಾಲಾ'

ವಿಷಯ ತಿಳಿದದ್ದೇನಪ್ಪಾ ಅಂದ್ರೆ. ಗುಂಡಣ್ಣನ ತಂದೆ ಶಾಮಾಶಾಸ್ತ್ರಿಗಳು ಘನ ಆಯುರ್ವೇದ ಪಂಡಿತರು. ಜೊತೆಗೆ ವೈದೀಕ ಬ್ರಾಹ್ಮಣರು. ಮದುವೆ, ಮುಂಜಿ, ವೈದೀಕ ನಡೆಸುತ್ತಿದ್ದರು. ಅವರ ಕೊಠಡಿಯಲ್ಲಿ ತಾಳೆಗರಿ ಗ್ರಂಥಗಳ ರಾಶಿಯಿತ್ತು. ಅವರು ತಾಮ್ರವನ್ನು ಚಿನ್ನ ಮಾಡುವ ಪ್ರಯೋಗಗಳನ್ನು ನಡೆಸುತ್ತಿದ್ದರು. ಇನ್ನೂ ರಸ ವಿದ್ಯೆ ಸಿದ್ಧಿಸಿರಲಿಲ್ಲ.

ಅವರ ಕೈಗುಣ ಚೆನ್ನಾಗಿದ್ದು ತಮ್ಮೆಲ್ಲ ಖಾಯಿಲೆಗಳಿಗೂ ಇವರ ಬಳಿಗೆ ಜನ ಬರುತ್ತಿದ್ದರು. ಶಾಮಾಶಾಸ್ತ್ರಿಗಳು ಒಂದು ಲೇಹ್ಯ ತಯಾರಿಸಿ, ಅದನ್ನು ಕಾಯಿಸಿ-ಆರಿಸಿ, ಸಣ್ಣ ಸಣ್ಣ ಉಂಡೆಗಳಂತೆ ಮಾಡಿಟ್ಟಿದ್ದರು. ''ಸರ್ವಜೀರ್ಣಕಾರಿ ಲೇಹ್ಯ'' ಎಂದು ಹೆಸರಿಟ್ಟಿದ್ದರು. ಒಂದು ಉಂಡೆ ತಿಂದರೆ ಸಾಕು. ಹೊಟ್ಟೆ ಬಕಾಸುರನ ಹೊಟ್ಟೆ ಆಗುತ್ತಿತ್ತು.

ಗುಂಡಣ್ಣನ ಮಾತುಗಳನ್ನು ನಂಬದೆ ನಾನು ಒಂದು ಉಂಡೆ ತಿಂದೆ ರುಚಿಯಾಗಿತ್ತು. ಖಾರ-ಸಿಹಿ-ಉಪ್ಪು-ಹುಳಿ ಬೆರೆತ ರುಚಿ. ಸ್ವಲ್ಪ ಹೊತ್ತಿಗೆಲ್ಲಾ ಹೊಟ್ಟೆಯಲ್ಲಿ ಉರಿ-ಹಸಿವು ಹೊಟ್ಟೆಯಲ್ಲಿ ಬೆಂಕಿ ಬಿದ್ದ ಹಾಗೆ ಅನುಭವ ನಾನು ಓಡಿಹೋಗಿ ಕೆರೆಯ ನೀರಿಗೆ ಬಿದ್ದೆ. ಒಂದು ಘಂಟೆ ತಣ್ಣೀರಿನಲ್ಲಿದ್ದರೂ, ಹೊಟ್ಟೆಯುರಿ ನಿಲ್ಲಲಿಲ್ಲ. ಎಳನೀರು-ಬಿಂದಿಗೆ ನೀರು ಕುಡಿದರೂ ಉಹುಂ.

ಗುಂಡಣ್ಣ ಇನ್ನೊಂದು ಲೇಹ್ಯ ತಿನ್ನಿಸಿದ. ಅರ್ಧಘಂಟೆಯಲ್ಲಿ ಹೊಟ್ಟೆ ತಣ್ಣಗಾಯಿತು. ಸಾಕಪ್ಪಾ ಇವನ ಸಹವಾಸ ಅಂತ ಮನೆಗೆ ಓಡಿದೆ.

ಅನಂತರ ತಿಳಿದು ಬಂದದ್ದೇನೆಂದರೆ, ಕೆಸವಿನದಂಟು, ಬಾಳೆದಿಂಡು, ಹಸಿಶುಂಠಿ, ಮೆಣಸು, ಲವಂಗ, ಜೇನುತುಪ್ಪ, ಯಾಲಕ್ಕಿ, ಕಲ್ಲುಸಕ್ಕರೆ, ತಾಟಿಬೆಲ್ಲ, ಪಚ್ಚಕರ್ಪೂರ ಇವೆಲ್ಲ ಹಾಕಿ ಬೇಯಿಸಿ, ಕುದಿಸಿ, ಏನೇನೋ ಮಾಡಿ ಲೇಹ್ಯ ತಯಾರು ಮಾಡ್ತಾರಂತೆ, ಆದನ್ನ ತಕ್ಕ ಪ್ರಮಾಣದಲ್ಲಿ ತಿಂದರೆ ಬಕಾಸುರನ ಹೊಟ್ಟೆ ಹಸಿವು ಉಂಟಾಗುತ್ತದಂತೆ.

ದಯವಿಟ್ಟು ನೀವು ಯಾರೂ ಈ ಲೇಹ್ಯ ಮಾಡುವ ಪ್ರಯತ್ನ ಮಾಡಬೇಡಿ. ನೀವು ಪ್ರಯತ್ನ ಮಾಡಿ, ತಿಂದು ಏನಾದರೂ ಹೆಚ್ಚು ಕಮ್ಮಿ ಆದರೆ ನಾನು ಜವಾಬ್ದಾರನಲ್ಲ. ತಿನ್ನುವುದು-ತಿಂದು ಜೀರ್ಣಿಸಿಕೊಳ್ಳುವುದು ಒಂದು ಕಲೆ. ವಸಂತ ಬಂದಾಗ ಚಿಗುರಿನ ನಡುವೆ ಕೋಗಿಲೆ ಹಾಡುವ ಹಾಗೆ ಜಲಪಾತದಿಂದ ಮೀನು ಚಿಮ್ಮುವ ಹಾಗೆ, ಹೂವರಳಿದಾಗ ದುಂಬಿ ಹಾಡಿದ ಹಾಗೆ, ರೂಪಸಿಯ ಕಂಡು ಕವಿ ಹೃದಯ ಅರಳುವ ಹಾಗೆ ಹರಿವ ನದಿಯ ನಿನಾದಕ್ಕೆ ಮಯೂರ ನರ್ತಿಸುವ ಹಾಗೆ.

ನಮಗೆ-ನಿಮಗೆ ದೇವರು ಕೊಟ್ಟ ಹೊಟ್ಟೇನೇ ಸಾಕು ಏನಂತೀರಿ?

ರೆವ್ವಿಂಗ್ ಇನ್ ನ್ಯೂಟ್ರಲ್
(Revving in neutral)

- ಭೂಷಿ

ದೆಹಲಿಗೆ ಪೋಸ್ಟಿಂಗ್ ಬರುವ ಹೊತ್ತಿಗೆ ನಾನಾಗಲೇ 15, 16 ವರ್ಷ ಸೇವೆ ಸಲ್ಲಿಸಿದ್ದೆ. ಅಂದರೆ, ನನ್ನ ಒಟ್ಟು ಸೇವೆಯಲ್ಲಿ ಅರ್ಧಭಾಗದಷ್ಟು ಅಷ್ಟೇ! ಈ ದಿನಗಳಲ್ಲಿ ನನಗೆ ತಿಳಿಹಾಸ್ಯವೋ, ರೋಚಕವೋ, ಕುತೂಹಲಕಾರಿಯೋ ಆದಂತಹವುಗಳೆಂದು ಕಂಡುಬಂದದ್ದನ್ನು ನಿಮಗೆ ಇದುವರೆವಿಗೂ ತಿಳಿಸುತ್ತಾ ಬಂದಿದ್ದೇನೆ. ಅವುಗಳಲ್ಲಿ ಕೆಲವನ್ನು ನೀವು ಮೆಚ್ಚಿರಬಹುದು ಮತ್ತೆ ಕೆಲವನ್ನು ಕಡೆಗಣಿಸಿರಬಹುದು. ನನ್ನ ಮಟ್ಟಿಗೆ ಹೇಳುವುದಾದರೆ, 15, 16 ವರ್ಷದ ಸರ್ವಿಸ್ ಲೈಫ್‌ನಿಂದ 14, 15 ಪ್ರಸಂಗಗಳನ್ನು ಗುರುತಿಸಿರುವುದು ಒಂದು ಹೆಚ್ಚುಗಾರಿಕೆ ಅಂತ ಕಾಣುತ್ತಿದೆ. ಮೊದಲೆರಡು ಮೂರು ಪ್ರಸಂಗಗಳು ಆದ ಮೇಲೆ ನಾನಾಗಲೇ ಸಂಪಾದಕರಿಗೆ 'ಪ್ರತಿಯೊಂದೂ ತಿಳಿಹಾಸ್ಯವಾಗುವುದು ಸಾಧ್ಯವಿಲ್ಲ' ಅಂತ ಹೇಳಿದ್ದಕ್ಕೆ ಅವರೇನೋ 'ತಿಳಿಹಾಸ್ಯಕ್ಕಾಗಿ ತಿಕಣಬೇಡಿ ಹೇಳಬೇಕಾದ್ದನ್ನು ಸರಳವಾಗಿ ತಿಳಿಸಿ' ಅಂತ ಉತ್ತೇಜನ ಕೊಟ್ಟರು. ಆದರೆ ಈಗ ಮತ್ತೆ ತಿಣಕಬೇಕಾದ ಸ್ಥಿತಿ ಬಂದಿದೆ ಅಂತ ತೋರುತ್ತಿದೆ. ಏಕೆಂದರೆ, ಮುಂದಿನ 15 ವರ್ಷಗಳ ಸರ್ವಿಸ್‌ನ ಘಟನೆಗಳನ್ನು ನೆನಪಿಗೆ ತರಲು ಪ್ರಯತ್ನಪಟ್ಟಾಗ ನನಗೇಕೋ ತಿಳಿಹಾಸ್ಯವಿರಲಿ, ಕುತೂಹಲಕಾರಿಯಾದ ಘಟನೆಗಳೂ ಸಹ ಯಾವುದೂ ಅಷ್ಟಾಗಿ ನೆನಪಿಗೆ ಬರುತ್ತಿಲ್ಲ. ಈ ಹದಿನೈದು ವರ್ಷಗಳಲ್ಲಿ ನಾನು ಏನನ್ನೂ ಸಾಧಿಸಲಿಲ್ಲ ಅಂತ ಏನಿಲ್ಲ. ಹಾಗೆ ನೋಡುವುದಾದರೆ, ನನ್ನ ವೃತ್ತಿಯಲ್ಲಿ ನಾನು ಬೆಳೆದೆ; ಹೆಸರು ಗಳಿಸಿದೆ; ರಾಷ್ಟ್ರಪತಿಯವರಿಂದ ಪದಕ ಗಳಿಸಿದೆ ಆದರೆ, ಇವೆಲ್ಲಾ ವೃತ್ತಿಗೆ ಸಂಬಂಧಿಸಿದ ಸಾಧನೆಗಳಾದ್ದರಿಂದ ಇಲ್ಲಿ ಅವುಗಳನ್ನು ಬಣ್ಣಿಸಲು ಅಸಂಬದ್ಧ ಅಂತ ಅನ್ನಿಸುತ್ತಿದೆ. ಈ ದಿನಗಳಲ್ಲಿ ನಾನು ಸುಮಾರು ಏಳು ವರ್ಷ ದೆಹಲಿಯಲ್ಲಿ (ಇದರಲ್ಲಿ ಒಂದು ವರ್ಷ ನ್ಯಾಷನಲ್ ಡಿಫೆನ್ಸ್ ಕಾಲೇಜಿನಲ್ಲಿ ಅಂದರೆ NDC ಯ ವಿದ್ಯಾರ್ಥಿಯಾಗಿ) ಜಮ್ಮು ಕಾಶ್ಮೀರದಲ್ಲಿ ಬ್ರಿಗೇಡಿಯರ್ ಆಗಿ ಎರಡು ವರ್ಷ, ಸಿಕಂದರಾಬಾದಿನಲ್ಲಿಯ ನಮ್ಮ ಉನ್ನತ ಶಿಕ್ಷಣದ ಸಂಸ್ಥೆಯಾದ 'ಮಿಲಿಟರಿ ಕಾಲೇಜ್ ಆಫ್ ಎಲೆಕ್ಟ್ರಾನಿಕ್ಸ್ ಅಂಡ್ ಮೆಕಾನಿಕಲ್ ಇಂಜಿನಿಯರಿಂಗ್'(MCEME)ನ ಮುಖ್ಯಸ್ಥನಾಗಿ ನಾಲಕ್ಕು ವರ್ಷಕ್ಕಿಂತ ಹೆಚ್ಚಿಗೆಯಾಗಿ, ತಿಲ್ಲಿಂಗ್‌ಟನ್‌ನಲ್ಲಿಯ ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜಿನಲ್ಲಿ (DSSC)ಯಲ್ಲಿ ಇನ್‌ಸ್ಟ್ರಕ್ಟರ್ ಆಗಿ ಸುಮಾರು ಎರಡು ವರ್ಷ ಮತ್ತು ಕಡೆಯದಾಗಿ, ಲಕ್ನೋದಲ್ಲಿದ್ದ ಆರ್ಮಿ ಕಮಾಂಡ್ ಹೆಡ್‌ಕ್ವಾರ್ಟರ್ಸಿನಲ್ಲಿ ಸುಮಾರು ಒಂದೂವರೆ ವರ್ಷ ಕಳೆದೆ.

ಸಂಕ್ಷಿಪ್ತವಾಗಿ ಹೇಳಬೇಕಾದರೆ ನಾನು DSSCಗೆ ಅಧ್ಯಾಪಕನಾಗಿ ಹೋದದ್ದು ಮತ್ತೊಂದು ಹೆಗ್ಗಳಿಕೆಯ ವಿಷಯುವಾಯಿತು ಏಕೆಂದರೆ, ಈ ಹುದ್ದೆಗೆ

ಚುನಾಯಿತರಾದವರಲ್ಲಿ EME ಇಂದ ಮೊದಲಿಗನಾದೆ. ನನ್ನ ಜಮ್ಮು ಕಾಶ್ಮೀರದ ಟೆನ್ಯೂರ್ ಬಹಳ ಸುಗಮವಾದದ್ದಾಗಿತ್ತು. ಎರಡು ವರ್ಷಗಳ ಕಾಲ ಪ್ರವಾಸಿಗರಿಗಿಂತ ಹೆಚ್ಚಾಗಿ, ಸಂಸಾರ ಸಮೇತ ಸುತ್ತಾಡಿದೆ ಲಢಾಕ್‌ನಲ್ಲಿ ಸಾಮಾನ್ಯವಾಗಿ ಪ್ರವಾಸಿಗರು ಹೋಗದಿದ್ದಂತಹ ತಾಣಗಳಿಗೆ ಭೇಟಿಕೊಟ್ಟೆ. ಪೂಗಾ ಕಣಿವೆ (ಗಂಧಕದ ಚಿಲುಮೆಗಳ ಜಾಗ) 17,500 ಅಡಿ ಎತ್ತರದ 'ಚಾಂಗ್‌ಲಾ ಘಾಟಿ, ಪ್ರಪಂಚದಲ್ಲಿನ ಛಳಿ ಪ್ರದೇಶಗಳಲ್ಲಿ ಎರಡನೆಯ ಸ್ಥಾನವೆಂದು ಹೆಸರು ಗಳಿಸಿದ್ದ 'ದ್ರಾಸ್' ಎಂಬ ಜಾಗ, ಕಾರ್ಗಿಲ್ ಮತ್ತು ಜ್ಹೋ ಜಿಲಾ' ದಾಟುವಾಗ ಹಿಮದಿಂದ ಕೂಡುದ ಚಂಡಮಾರುತ ಮತ್ತು ಭೂಕುಸಿತ ಇವುಗಳನ್ನು ಎದುರಿಸಿದೆ. ಅಮರ್‌ನಾಥ್ ಯಾತ್ರೆ ಮಾಡಿದೆ (ಬಾಲ್‌ಟಾಲ್ ಎಂಬ ಕಡೆಯಿಂದ) ಇವೆಲ್ಲಾ ಕುತೂಹಲಕಾರಿಗಳಾಗಿರಬಹುದು. ಆದರೆ, ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ವೃತ್ತಿಗೆ ಮಾಮೂಲು ಎಂದು ಅನಿಸಿ ತಿಳಿಸಬೇಕಾದ್ದೇನೂ ಇಲ್ಲಿ ಇದ್ದ ಹಾಗೆ ತೋರುತ್ತಿಲ್ಲ.

ಹೀಗೇ NDC ನಲ್ಲಿದ್ದಾಗ ನೇಪಾಳ, ಇರಾನ್, ಇರಾಕ್, ಲೆಬನಾನ್, ಕುವೈಟ್, ರಷ್ಯ ಮತ್ತು ಬೆಲ್‌ಗ್ರೇಡ್ (ಯುಗೋಸ್ಲಾವಿಯಾ) ಇವುಗಳಿಗೆ ಭೇಟಿ ಕೊಟ್ಟೆ. ನನ್ನ ಕಡೆಯ ಟೆನ್ಯೂರ್, ಲಕ್ನೋದಲ್ಲಿನದು ಒಂದು ಬಗೆಯ ತೀರ್ಥಯಾತ್ರೆ ಟೆನ್ಯೂರ್ ಅನ್ನಬಹುದು. ಅಲಹಾಬಾದ್, ವಾರಣಾಸಿ, ಗಯಾ, ಅಯೋಧ್ಯ, ಚಕ್ರತೀರ್ಥ, ನೈಮಿಶಾರಣ್ಯ, ಬದರಿ, ಕೇದಾರ... ಸಂಸಾರ ಸಮೇತ ಸುತ್ತಿದೆ. ಅವರೆಲ್ಲಾ ಸಾಕಷ್ಟು ಪುಣ್ಯಕಟ್ಟಿಕೊಂಡರೇನೋ... ನನಗೆ ಏನು ಕಟ್ಟಿತೋ ಗೊತ್ತಿಲ್ಲ!

ಇಷ್ಟು ಹೇಳಿದ ಮೇಲೆ ಉಳಿದದ್ದೇನಿದೆ? ಕೇವಲ ದೆಹಲಿಯಲ್ಲಿನ ಜೀವನದ ಬಗ್ಗೆ ಮತ್ತು ಸಿಕಂದರಾಬಾದ್ ಟೆನ್ಯೂರ್ ಬಗ್ಗೆ, ಅಷ್ಟೇ. ಇವೆರಡನ್ನೂ ಒಂದೊಂದು ಪ್ರಸಂಗದಲ್ಲಿ ತಿಳಿಸಿ, ಈ ಅನುಭವ ಮಾಲಿಕೆಗೆ ಮಂಗಳ ಹೇಳುವ ಅಂತ ಅಂದುಕೊಂಡಿದ್ದೇನೆ.

★★★

ನನಗೆ 65ರಲ್ಲಿ ದೆಹಲಿಗೆ ಪೋಸ್ಟಿಂಗ್ ಬಂದಾಗ ಮತ್ತೆ ಸಮರದ ಕಾವು ಏರತೊಡಗಿತ್ತು. ಈಸಲವಾದರೂ ಪಂಜಾಬ್ ಕಡೆ ಎಲ್ಲಾದರೂ ಪೋಸ್ಟಿಂಗ್ ಬರಬಹುದು. ಸಮರದಲ್ಲಿ ಭಾಗವಹಿಸಬಹುದು ಅಂತ ಅಂದುಕೊಂಡಿದ್ದೆ. ಆದರೆ ಆ ಸಮಯವನ್ನು ದೆಹಲಿ ಹೆಡ್‌ಕ್ವಾರ್ಟರ್ಸಿನಲ್ಲಿ ಕಳೆದೆ! ದೂರದಿಂದ ಸಮರದ ನಿರ್ದೇಶನದ ವೈಖರಿಯನ್ನು ಸ್ವಲ್ಪ ಸವಿದೆ ಅಷ್ಟೇ.....

ನಾನು ದೆಹಲಿಗೆ ಲೆ.ಕ. ಆಗಿ ಹೋದೆ. ನಮ್ಮ EME ಹೆಡ್‌ಕ್ವಾರ್ಟರ್ಸಿನಲ್ಲಿ ಸ್ಟಾಫ್ ಆಫೀಸರ್ ಆಗಿ ಸುಮಾರು ಒಂದೂವರೆ ವರ್ಷ ಕಳೆದೆ ಕೇಂದ್ರದಲ್ಲಿ ವ್ಯವಹಾರ ನಡೆಸುವ ಪರಿಯನ್ನು ಗಮನಿಸಿದೆ... ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಒಂದೂವರೆ ವರ್ಷದ ನಂತರ DSSC ಗೆ Instructor ಆಗಿ ಹೋಗಿ ಮತ್ತೆ ಪ್ರಮೋಷನಲ್ ಮೇಲೆ (ಕರ್ನಲ್) ವಾಪಸ್ ಬಂದೆ! ಇಷ್ಟವಿಲ್ಲದಿದ್ದರೂ ಬಲವಂತದಿಂದ ಕರೆಸಿಕೊಂಡರು! 'ಏಕೆ?' ಅಂತ

ಕೇಳಿದ್ದಕ್ಕೆ ''ನೀನು ಒಂದೂವರೆ ವರ್ಷಗಳ ಕೆಳಗೆ ರಕ್ಷಣಾ ಮಂತ್ರಾಲಯಕ್ಕೆ ಕಳುಹಿಸಿದ್ದ ಕೆಲವು ಕೇಸುಗಳು ಇತ್ಯರ್ಥವಾಗದೇ ಉಳಿದಿವೆ. ನೀನು ಅವುಗಳನ್ನು ಮೊದಲು ಮಾಡಿದ್ದೆಯಾದ್ದರಿಂದ ನಿನಗೆ ವಿಷಯಗಳ ಪರಿಚಯ ಸಾಕಷ್ಟಿದೆ ಅದಕ್ಕಾಗಿ'' ಅಂದರು! ಏನು ಮಾಡುವುದು? ಸರ್ಕಾರಿ ನೌಕರಿ ಅಂದ ಮೇಲೆ ಮಣಿಯಲೇ ಬೇಕಲ್ಲಾ ಬಂದೆ.

ರಕ್ಷಣಾ ಮಂತ್ರಾಲಯದ ಕಾರ್ಯವೈಖರಿಗೆ ನಮ್ಮ ಆಗಿನ ಮುಖ್ಯಸ್ಥರಾಗಿದ್ದವರು ''ರೆವ್ವಿಂಗ್ ಇನ್ ನ್ಯೂಟ್ರಲ್''(Revving in neutral) ಅಂತ ಹೆಸರಿಸಿದ್ದರು! ಅಂದರೆ ಆರ್ಭಟ ಜಾಸ್ತಿ. ನಾಳಿನ ಕೆಲಸ ಇವತ್ತೇ ಆಗಬೇಕೆಂಬ ತರಾತುರಿಯ ಹೇರಿಕೆ ಮೇಲೆ ಕೇಸುಗಳು ತಯಾರಾಗುತ್ತಿದ್ದವು. ಆದರೆ ಅವುಗಳ ಅನುಮೋದನೆಗೆ ಅಷ್ಟೇ ತರಾತುರಿ ಕಾಣುತ್ತಿರಲಿಲ್ಲ! ಒಂದು ನಾಲ್ಕು ಚಕ್ರದ ಅಥವಾ ದ್ವಿಚಕ್ರವಾಹನವಾಗಲಿ, ಗೇರ್ ನ್ಯೂಟ್ರಲ್‌ನಲ್ಲಿರುವಾಗ, accelerator ಒತ್ತಿದರೆ ಏನಾಗುತ್ತೆ ಹೇಳಿ?.. ನಿಂತಲ್ಲೇ ಜೋರಾಗಿ ಶಬ್ದಮಾಡುತ್ತದೆಯೇ ಹೊರತು ವಾಹನ ಒಂದು ಇಂಚೂ ಮುಂದೆ ಹೋಗುವುದಿಲ್ಲ! ಅಲ್ಲವೇ? ಇದೇ ರೀತಿ ರಕ್ಷಣಾ ಮಂತ್ರಾಲಯದ ವರ್ತನೆಯಾಗಿತ್ತು! ಹೀಗಾಗಿ, ನಾನು ಲೆ.ಕ. ಆಗಿ ಮೇಲಕ್ಕೆ ಕಳುಹಿಸುತ್ತಿದ್ದ ಕೇಸುಗಳು ನಾನು ಕರ್ನಲ್ ಆಗಿ ಬರುವವರೆವಿಗೂ ಕಾದಿದ್ದುದು ಆಶ್ಚರ್ಯವೇನಿಲ್ಲ! ಈ ಬಗೆಯ 'ರೆವ್ವಿಂಗ್' ಗೆ ಮುಖ್ಯ ಕಾರಣ, ನನ್ನ ಪ್ರಕಾರ ರಕ್ಷಣಾ ಮಂತ್ರಾಲಯದಲ್ಲಿ ಎಲ್ಲಾ ಸ್ಥರಗಳಲ್ಲೂ ಹರಡಿರುವ ವಿತ್ತಾಧಿಕಾರಿಗಳು (Financial Advisor (FA), Deputy Financial Advisor (DFA), Assistant Financial Advisor (AFA)... ಇತ್ಯಾದಿ, ಇತ್ಯಾದಿ. ಅದರಲ್ಲೂ ದರ್ಜೆ ಕಡಿಮೆ ಆದಷ್ಟೂ ಅಡಚಣೆ ಜಾಸ್ತಿ! (ಎಲ್ಲರೂ ಹಾಗೇ ಅಂತೇನೂ ನಾನು ಹೇಳುತ್ತಿಲ್ಲ ನನ್ನ ಅನುಭವ ತಿಳಿಸುತ್ತಿದ್ದೇನೆ ಅಷ್ಟೆ... ಯಾರೂ ಕೋಪಿಸಿಕೊಳ್ಳಬೇಕಾದ ಪ್ರಮೇಯವಿಲ್ಲ!)

ನಿರ್ಧರಿಸಬೇಕಾಗಿದ್ದುದರಲ್ಲಿ ಎರಡು ಕೇಸುಗಳು ಮುಖ್ಯವಾಗಿದ್ದವು. ಅವುಗಳನ್ನು ತರಿಸಿಕೊಂಡು ವಿಮರ್ಶಿಸಿದೆ. ಒಂದು ನಮ್ಮ MCEME ಯ ಸಿಬ್ಬಂದಿ ಮತ್ತು ಯಂತ್ರೋಪಕರಣಗಳಿಗೆ ಸಂಬಂಧಪಟ್ಟಿದ್ದು... ಮತ್ತೊಂದು ಒಂದು ಬೇಸ್‌ವರ್ಕ್‌ಷಾಪ್ (Base workshop) ಅನ್ನು ಕೆಲವು ಹೊಸಾ ಬಗೆಯ ಗನ್ನುಗಳ ರಿಪೇರಿಗಾಗಿ ಮಾರ್ಪಡಿಸುವುದು ಇದರಲ್ಲಿ, ಮೊದಲು ಬೇಸ್ ವರ್ಕ್‌ಷಾಪ್ ವಿಷಯ ಪ್ರಸ್ತಾಪಿಸಿ ನಂತರ ಯೂನ್ನಿಟ್ಟಿಗೆ ಬರುತ್ತೇನೆ.

ಸೈನ್ಯಕ್ಕೆ ಎರಡು, ಮೂರು ವರ್ಷಗಳ ಹಿಂದೆ ಸೇರ್ಪಡೆಯಾಗಿದ್ದ ಕೆಲವು ವಿಶೇಷ ರೀತಿಯ ಗನ್‌ಗಳು ಮುಂದೆ 3, 4 ವರ್ಷಗಳಲ್ಲಿ overhaulಗೆ ಬರಬಹುದೆಂಬ ನಿರೀಕ್ಷೆಯಿತ್ತು ಅದಕ್ಕಾಗಿ ವರ್ಕ್‌ಷಾಪನ್ನು ಸಜ್ಜುಗೊಳಿಸಲು ಬೇಕಾದ ಸಿಬ್ಬಂದಿ, ಕಟ್ಟಡ ಮತ್ತು ಸಲಕರಣೆಗಳಿಗಾಗಿ ನಾನು ಲೆ.ಕ. ಆಗಿದ್ದಾಗಲೇ ಕೇಸ್ ತಯಾರು ಮಾಡಿ ಸರ್ಕಾರದ ಅನುಮತಿಗೆ ಕಳುಹಿಸಿದ್ದೆವು. ನಾನು ವಾಪಸ್ ಬರುವ ಹೊತ್ತಿಗೆ ಕಡತ ಒಂದು 50-60 ಟಿಪ್ಪಣಿಗಳನ್ನು ಕೂಡಿಹಾಕಿಕೊಂಡಿತ್ತೇ ಹೊರತು, ನಿರ್ಧಾರದ ಹಂತಕ್ಕೆ ಬಂದಿರಲ್ಲಿ! ಅದನ್ನು ವಿಮರ್ಶೆ ಮಾಡಿ ನಿರ್ಧಾರಕ್ಕೆ ಬರಲು ಒಂದು ಮೀಟಿಂಗ್ ಕರೆಯುವಂತೆ

ನಾನು Director ಸ್ಥರದ ಅಧಿಕಾರಿಗೆ ಟಿಪ್ಪಣಿ ಬರೆದೆ. ಫೋನ್ ಮಾಡಿದೆ. ಅದರಂತೆ ಮೀಟಿಂಗ್ ಅಳವಡಿಸಿದೆ. ಮೀಟಿಂಗ್‌ನಲ್ಲಿ ಅವನಲ್ಲದೇ, ನಾನು ಮತ್ತು ಒಬ್ಬDFA ಇದ್ದೆವು. ಉಭಯ ಕುಶಲೋಪರಿ ಆದಮೇಲೆ ಚರ್ಚೆ ಷುರು ಆಯಿತು ಮೀಟಿಂಗ್‌ನ ಅಧ್ಯಕ್ಷತೆವಹಿಸಿದ್ದ ಡೈರೆಕ್ಟರ್ ಸಾಹೇಬರು ವಿಷಯವನ್ನು ಓದುವ ಕಷ್ಟಕ್ಕೆ ಹೋಗಿರಲಿಲ್ಲ. ಅಂತ ಕಾಣುತ್ತದೆ. ಮಾಮೂಲಿನಂತೆ ಉಪಯೋಗಿಸುವ ಇಲಾಖೆಯ ಅಧಿಕಾರಿ (ಅಂದರೆನಾನು) ಮತ್ತು 'ವೀಟೋ' ಪವರ್ ಇದೆಯೆಂದುಕೊಂಡಿದ್ದDFA ಇವರುಗಳ ವಾಗ್ವಾದದಿಂದ ವಿಷಯ ತಿಳಿದುಕೊಂಡರಾಯಿತು ಅಂತಲೋ ಏನೋ, DFA ಗೆ ಮಾತು ಷುರು ಮಾಡಲು ಅವಕಾಶ ಕೊಟ್ಟ. DFA, ತನ್ನ ಹಳೇ ಹಾಡನ್ನು (ಅಂದರೆ ಕಡತದಲ್ಲಿ ಬರೆದಿದ್ದ ಟಿಪ್ಪಣಿಗಳನ್ನು) ಹಾಡಿದ. ನಾನು ಸಹ 'ನಿನ್ನ 10ನೇ ಟಿಪ್ಪಣಿಗೆ, 13 ರಲ್ಲಿ ಉತ್ತರಿಸಿದ್ದೇನೆ... ನೀನು ಮತ್ತೆ ಅದೇ ಟಿಪ್ಪಣಿಯನ್ನು 30 ರಲ್ಲಿ ಬರೆದಾಗ, 35 ರಲ್ಲಿ ಉತ್ತರ ಮತ್ತೆ ಕೊಟ್ಟಿದ್ದೇನೆ..'' ಹೀಗೆ ಕೇಳಿದ್ದೇ ಕೇಳುತ್ತಾ, ಹೇಳಿದ್ದೇ ಹೇಳುತ್ತಾ ಕಾಲ ಕಳೆಯುವುದರಿಂದ ಏನೂ ಪ್ರಯೋಜನವಿಲ್ಲ. ಇವತ್ತು ಏನಾದರೂ ನಿರ್ಧಾರಕ್ಕೆ ಬರೋಣ... ಗಾಡಿ ಮುಂದಕ್ಕೆ ಜರುಗಲಿ... ಹೊಸಾobjection ಏನಾದರೂ ಇದ್ದರೆ ಹೇಳು'' ಅಂದೆ. ಅವನಿಗೆ ಕೋಪ ಬಂದಿರಬೇಕು. ಆರ್ಮಿಯನ್ನೂ, EMEಯನ್ನೂ ಹೀಯಾಳಿಸಲು ಷುರು ಮಾಡಿದ. ಅಸಂಬಂದ್ಧವಾಗಿ ಆರೋಪಮಾಡುತ್ತಾ ''ನೀವು ಮಿಲಿಟರಿಯವರೇ ಹೀಗೆ ಒಂದು ಸಿಂಪಲ್ ಕೇಸ್ ಸಹput-up ಮಾಡೋಕೆ ಬರೊಲ್ಲ ಅದಕ್ಕೇ ಈ ರೀತಿ ತಡವಾಗುತ್ತಿರುವುದು'' ಅಂದ. ನನಗೂ ರೇಗಿತು ''ಸುಮ್ಮನೆ ನಮ್ಮ ಮೇಲೆ ಅಪವಾದ ಹೊರಿಸಬೇಡ ನಿನಗೆ ಬೇರೆ ಏನು ಮಾಹಿತಿ ಬೇಕು, ಹೇಳು'' ಅಂದೆ. ''ನಿಮಗೆ ಹೇಗೆ ಬರೆಯಬೇಕು ಅನ್ನುವುದು ಗೊತ್ತಿಲ್ಲದ ಮೇಲೆ ನಾನೇನು ನಿಮಗೆ ಟ್ರೈನಿಂಗ್ ಕೊಡುವವನೇ? ಕೇಸ್ ಸರಿಯಾಗಿ put-up ಮಾಡು ಅಂದ!'' ''ಸರಿಯಾಗಿ ಅಂದರೆ ಏನು?'' ಅಂತ ಕೇಳಿದೆ... ಮತ್ತೆ ಹೀಯಾಳಿಸಲು ಷುರು ಮಾಡಿದ! ತಡೆಯಲಾರದೇ, ನಾನು ''ಮೂರ್ಖರು ನಾವಲ್ಲ. ನೀನು. ಕೇಸುಗಳೆಲ್ಲಾ ತಡವಾಗಿ ನಿರ್ಧಾರವಾಗುವುದು ನನ್ನಂಥಹವರಿಂದಲೇ... ನೀನು ಬರೆಯುವsilly objection ಗಳಿಂದ... ಈಗಲೂ ಹೇಳು, ಹೆಚ್ಚು ಮಾಹಿತಿ ಏನು ಬೇಕು ಅಂತ'' ಅಂತ ತಿರುಗಿಸಿ ಹೇಳಿದೆ. ""He is using unparliamentary language. I will not attend this meeting any more ಅಂತ ಎದ್ದ. ನಾನೂ ಸಹ I am not enamoured of attending this meeting any longer. He is not doing my grand father's job nor and doing his grandfather's job. This is a Government job. More delay means more cost... already the cost has doubled.... The project has to be sanctioned one day may be at four times the original estimate ಅಂತ ಹೇಳಿ ಹೊರಬಂದೆ.Boss ಗೆ ವಿಷಯ ತಿಳಿಸಿ ''ನಾನಿರುವ ತನಕ ನಿಮ್ಮ ಯಾವ ಕೇಸೂ ಇತ್ಯರ್ಥವಾಗುವುದಿಲ್ಲ ಅಂತ ಕಾಣುತ್ತೆ. ನನಗೆ ಪೋಸ್ಟಿಂಗ್ ಕೊಡಿ ಯಾವುದಾದರೂ ಬೇಸ್ ವರ್ಕ್‌ಷಾಪ್‌ಗೆ'' ಅಂತ ಕೇಳಿದೆ... ಅಷ್ಟೇ... ಕೆಲವು ತಿಂಗಳ

ಮೇಲೆ NDC ಗೆ ನನ್ನನ್ನು ಚುನಾಯಿಸಿದರು ಕೆಲವು ದಿನಗಳ ನಂತರ, ಹೊಸದಾಗಿ EME ಬಾಸ್ ಆಗಿದ್ದವರು ನನಗೆ ಫೋನ್ ಮಾಡಿದರು. ""Nag, that base workshop case is sanctioned" ಅಂದರು. ""What is the cost sir" ಅಂತ ಕೇಳಿದ್ದಕ್ಕೆ "More than three times the original estimate' ಅಂದರು!

☆☆☆

ಇನ್ನು MCEME ವಿಚಾರ. ಇದರ ಸಂಘಟನೆಯಲ್ಲಿ ಮಹತ್ತರವಾದ ಮಾರ್ಪಾಡುಗಳಾಬೇಕಾಗಿದ್ದುದರಿಂದ ನಾವು ಒಂದು ಹೊಸಾ ಕೇಸ್ ತಯಾರಿಸಿ ಹೆಚ್ಚಿಗೆ ಸಿಬ್ಬಂದಿ, ವಾಹನಗಳು - ಮುಖ್ಯವಾಗಿ ಟ್ಯಾಂಕ್‌ಗಳು ಮತ್ತು ಇತರ ಯಂತ್ರೋಪಕರಣಗಳನ್ನು ಅದರಲ್ಲಿ ಕೋರಿದ್ದೆವು. ಈ ಕೇಸ ಒಂದು ವಿಶೇಷ ಕಮಿಟಿಯ ಮುಂದೆ ಚರ್ಚೆಗೆ ಬಂತು.

ಇಲ್ಲೂ ಅಷ್ಟೇ.... DFA ದೇ ಅಧಿಕಾರ... ಇದು ಏಕೆ? ಇವನ್ಯಾಕೆ? ಇಷ್ಟು ಜನ ಏಕೆ?... ಇತ್ಯಾದಿ, ಇತ್ಯಾದಿ ಅಸಂಖ್ಯೆ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು. ಈ ಮನುಷ್ಯ ಬೇರೆ ಡಿಪಾರ್ಟ್‌ಮೆಂಟಿನಿಂದ ಇಲ್ಲಿಗೆ ಬಂದಿದ್ದರೂ ಸಹ ಪ್ರಶ್ನೆಗಳನ್ನು ಕೇಳುವುದರಲ್ಲಿ ಏನೂ ಕಮ್ಮಿ ಇರಲಿಲ್ಲ. ಎಷ್ಟೇ ಆಗಲಿ all authority and no responsibility ಅಲ್ಲವೇ, ಅವನ ಕೆಲಸದಲ್ಲಿ! ಸಮಜಾಯಿಷಿ ಕೊಟ್ಟು ಕೊಟ್ಟು ರೋಸಿ ಹೋಗಿದ್ದೆ. ಕಡೆಗೆ ತಡೆಯಲಾರದೇ""Gentlemen, I am sorry. I am not here to educate the financial representative about the functioning of the corps of EME. If he has to sit in judgement over my establishments, he should know the difference between a vehicle mechanic and a Black-smith" ಅಂತ ಹೇಳಿ ಹೊರ ಹೊರಟೆ! ಎಲ್ಲರೂ ದಿಘ್ಭ್ರಾಂತರಾದರು! ಹಿಂದೆಂದೂ ಹೀಗಾಗಿರಲಿಲ್ಲ! ಮೀಟಿಂಗ್ ಮುಂದಕ್ಕೆ ತಳ್ಳಿ ಅಧ್ಯಕ್ಷರು ತಮ್ಮ ಛೇಂಬರ್‌ಗೆ ಹೋದರು. ನನ್ನನ್ನು ಕರೆದು""well done Naga. He has it coming" ಅಂದರು! ನನ್ನ ಜೊತೆಯಲ್ಲಿ ಬಂದಿದ್ದ ಮತ್ತೊಬ್ಬ ಸ್ಟಾಫ್ ಆಫೀಸರ್ 'ಸರ್ ಈDFA EME ಬಗ್ಗೆ ತಿಳುವಳಿಕೆ ಪಡೆಯಲು ಸಿದ್ಧನಾಗಿದ್ದಾನೆ. ನಾನಿಲ್ಲೇ ಇದ್ದು ಆಮೇಲೆ ಬರುತ್ತೇನೆ' ಅಂತ ಹೇಳಿದ. 'ಸರಿ' ಎಂದು ವಾಪಸ್ ಬಂದು ಬಾಸ್‌ಗೆ ವಿಷಯ ತಿಳಿಸಿ, ಹಳೆಯ 'ಸರ್, ಬೇಸ್ ವರ್ಕ್‌ಷಾಪ್' ಅಂತ ಹಾಡು ಹಾಡಿದೆ ಪ್ರಯೋಜನವಾಗಲಿಲ್ಲ ಅನ್ನಿ.

ಕೆಲವು ದಿನಗಳ ನಂತರ ಕಮಿಟಿ ಅಧ್ಯಕ್ಷರು 'ವಿತ್ತಾಧಿಕಾರಿಗEME ಬಗ್ಗೆ ಸಾಕಷ್ಟು ತಿಳುವಳಿಕೆ ಬಂದಿದೆ... ನೀನು ಬಂದು ಮತ್ತೆ ನಿನ್ನ ಕೇಸ್Sponsor ಮಾಡು' ಅಂದರು. ಈ ಸಲ ನಮ್ಮ ತಯಾರಿ ಸರಿಯಾಗಿತ್ತು C Northcote Parkirison ಎಂಬುವವನು ಪ್ರತಿಪಾದಿಸಿರುವ"Parkinsion's First Law' ದ ಮೊರೆಹೊಕ್ಕೆವು. ಆದರೆ... ಅವನ ಪ್ರಕಾರ "The time taken for discussing a subject is inversely proportional to its importance' ಅಂತ! ನಮಗೆ ಮುಖ್ಯವಾಗಿ ಮಂಜೂರಾತಿ

ಬೇಕಾಗಿದ್ದುದು, ಹಳೆ 7-8 ಟ್ಯಾಂಕುಗಳ ಬದಲಿಗೆ ಸೈನ್ಯದಲ್ಲಿ ಸೇರ್ಪಡೆ ಆಗಿದ್ದ ಎಲ್ಲಾ ಬಗೆಯ ಟ್ಯಾಂಕುಗಳೂ ಸಾಕಷ್ಟು ಪ್ರಮಾಣದಲ್ಲಿ ಬೇಕಾಗಿದ್ದವು. ಈ important ವಿಷಯವನ್ನು ಕಡೆಯಲ್ಲಿ ಚರ್ಚಿಸಬೇಕೆಂದು ನಿರ್ಧರಿಸಿದೆವು ಒಂದೂವರೆ, ಒಂದೂ ಮುಕ್ಕಾಲು ದಿನಗಳು ಸಿಬ್ಬಂದಿ, ದ್ವಿಚಕ್ರ, ನಾಲ್ಕು ಚಕ್ರ ವಾಹನಗಳು ಇವುಗಳ ಬಗೆ ಸುಧೀರ್ಘ ಚರ್ಚೆ ನಡೆಸಿದೆವು. ಕೆಲವೆಡೆDFAಗೆ ಮಣಿದಂತೆ ತೋರಿಕೆಕೊಟ್ಟು, ಕೆಲವು ಬೇಡಿಕೆಗಳನ್ನು ಕಮ್ಮಿ ಮಾಡಿದೆವು. ಪಡೆ 15, 20 ನಿಮಿಷಗಳಿರುವಾಗ ಟ್ಯಾಂಕುಗಳ ವಿಷಯಕ್ಕೆ ಬಂದೆವು. ನಾನು ಟೇಬಲ್ ಮೇಲೆ ಬೇಕಾದಷ್ಟುChartಗಳನ್ನು ಹರಡುತ್ತಾ '"sorry ಈ ವಿಷಯದಲ್ಲಿ ಮಟ್ಟಿಗೆ ನಮ್ಮ ಬೇಡಿಕೆಯಲ್ಲಿ ಯಾವಬಗೆಯ ಖೋತಾ ಮಾಡಲು ಸಾಧ್ಯವಿಲ್ಲ. ದೀರ್ಘವಾದ ಚರ್ಚೆಗೆ ಸಿದ್ಧನಾಗಿದ್ದೇನೆ. ರಾತ್ರಿಯವರೆವಿಗೂ, ಮತ್ತೆ ನಾಳೆ ಬೇಕಾದರೂ ಚರ್ಚಿಸಲು ಸಿದ್ಧ'' ಅಂದೆ! ಎಲ್ಲರೂ ಮುಖ, ಮುಖ ನೋಡಿಕೊಂಡರು. ಕಡೆಗೆ DFA ಕಡೆ ಮುಖ ತಿರುಗಿಸಿದರು! ಅಷ್ಟು ಹೊತ್ತಿಗಾಗಲೇ ಅವನು ಹಣ್ಣಾಗಿದ್ದ ಅಂತ ಕಾಣುತ್ತೆ. ಯಾರ ಬೆಂಬಲವೂ ಇಲ್ಲವೆಂದು ತಿಳಿದ ಮೇಲೆ ''ಏನನ್ನೂ ಕಡಿಮೆ ಮಾಡಲು ಸಾಧ್ಯವಿಲ್ಲವೇ?'' ಅಂತ ನನ್ನನ್ನು ಕೇಳಿದ. ನಾನು ಸಾಧ್ಯವಿಲ್ಲ. ನೀನೇನೂ ನನ್ನ ಮಾತು ನಂಬಬೇಕೆಂದು ನಾನು ಆಗ್ರಹಮಾಡುವುದಿಲ್ಲ. ಪ್ರತಿಯೊಂದಕ್ಕೂ ಸರಿಯಾದ ಸಮಜಾಯಿಷಿ ಕೊಡಲು ತಯಾರಿದ್ದೇನೆ ಅಂದೆ! ಏನೂ ತೋಚದೇ ಸಹಿ ಹಾಕಿದ! ಹೇಗಿದೆ ಪಾರ್ಕಿನ್‌ಸನ್ ನಿಜವಾಗಿಯೂ ಮೇಧಾವಿ, ಅಲ್ಲವೇ?

★★★

ಒಂದು ಕಡೆಯ ಮಾತು. ರೆವ್ವಿಂಗ್ ಇನ್ ನ್ಯೂಟ್ರಲ್, ರೆವ್ವಿಂಗ್ ಇನ್ ಟಾಪ್ ಗೇರ್ ಸಹ ಆಗಬಹುದು ಎಂಬುದಕ್ಕೆ ಎರಡು ನಿದರ್ಶನ ಮೊದಲನೆಯದು... 62ರ ಆಘಾತದ ನಂತರ ಸೈನ್ಯ ಬಲವನ್ನೂ ದ್ವಿಗುಣಗೊಳಿಸುವ ನಿರ್ಧಾರ, ಕೇಂದ್ರ ಸರ್ಕಾರ ತೆಗೆದುಕೊಂಡಿತು. ಆಗಬೇಕಾದ ವಿವಿಧ ಯೂನಿಟ್‌ಗಳನ್ನು ಹುಟ್ಟುಹಾಕಲು, ಒಂದು ಬಗೆಯ blank cheque ಅನ್ನು ರಕ್ಷಣ ಮಂತ್ರಾಲಯದ ಅಧಿಕಾರಿಗಳು ಕೊಟ್ಟಿದ್ದರು; ಕಾಲಕ್ರಮೇಣ ತಮ್ಮ ತರಾತುರಿಗೆ ಸಂಕೋಚಪಟ್ಟೋ ಏನೋ, ಕೊಟ್ಟ ಅನುಮತಿಯಲ್ಲಿ ಖೋತಾ ಮಾಡುವಂತೆ ಕೇಳಿಕೊಂಡರು... ಅನ್ನಿ!

ಎರಡನೆಯ ಸಲ ಅಂದರೆ 71ರ ಸಮರಕ್ಕೆ ಮುಂಚೆ ನಾನಿನ್ನೂ ಅಲ್ಲೇ ಇದ್ದೆ ವಿಧಿವತ್ತಾದ ವಿಶ್ಲೇಷಣೆ, ಜವಾಬ್ದಾರಿಯುತ ನಿರ್ಧಾರ ಮತ್ತು ಸಮರಕ್ಕೆ ತಯಾರಾಗಲು ಬೇಕಾದ ಯಂತ್ರೋಪಕರಣಗಳ ಪಟ್ಟಿ... ಇವುಗಳನ್ನು ತಯಾರಿಸಿ, ನಮ್ಮ ಕೋರಿಕೆಗಳಿಗೆ ಅಳುಕದೇ ಮನ್ನಣೆ ಕೊಟ್ಟು, ಸಮಯಕ್ಕೆ ಸರಿಯಾಗಿ ಸೈನ್ಯವನ್ನು ಸಜ್ಜುಗೊಳಿಸುವಿಕೆ... ಎರಡನೇ ರೆವ್ವಿಂಗ್ ಇನ್ ಟಾಪ್ ಗೇರ್ ಇದು.

ತದನಂತರ... back to square one!

ಶ್ರೀ ಅಂದರೆ?

- ಗೌತಮ

ರಾಮಣ್ಣ ಗೋಪಣ್ಣ ಯಾವುದೋ ಸಂಚನ್ನು ನಡೆಸುತ್ತಿದ್ದುದು ನನಗೆ ಇಲ್ಲಿಂದಲೇ ಕಾಣಿಸುತ್ತಿತ್ತು. ಮುಂದಿನ ಆಗು-ಹೋಗುಗಳೆಲ್ಲಾ ನನ್ನ ತಲೆಗೆ ಹೊಳೆದು ಹೋಯಿತು ಅದರಂತೆಯೇ ಅಂದರೆ, ನನ್ನ ತಲೆಯಲ್ಲಿ ಹೊಳೆದಂತೆಯೇ ರಾಮಣ್ಣ ಹೊಂಚು ಹಾಕುತ್ತ ನನ್ನ ಕಡೆ ಹೆಜ್ಜೆ ಹಾಕತೊಡಗಿದ. ಅವನು ಹಾಗೆ, ನನ್ನ ಕಡೆ ಬಂದ ಅಂದರೆ ತರಲೆ ವಿಷಯ ತರ್ತಿದಾನೆ ಅಂತಲೇ ಅರ್ಥ. ತರಲೆ ಅಂದರೆ ಪ್ರಾಣ ಹೋಗೋ ಅಂಥದ್ದೇನಲ್ಲ. ಆದರೂ, ಖಂಡಿತವಾಗಿ ತಲೆ ತಿನ್ನುವಂಥದ್ದು. ಒಂದು ಉದಾಹರಣೆ ಕೊಟ್ಟರೆ ಅವನ ತರಲೆಯ ರೀತಿ ಅರ್ಥವಾಗುತ್ತೆ.

ಅದೊಂದು ದಿನ

'ಸಾರ್' ಅಂತ ಪ್ರಾರಂಭ.

'ಏನು ರಾಮಣ್ಣ?'

'ನಿಮ್ಮನೇಲಿ ಲಕ್ಷ್ಮಿ ಫೋಟೋ ಇದೆಯಾ ಸಾರ್?'

ನಾನು ಆ ಪ್ರಶ್ನೆಯ ಉದ್ದೇಶವೇನೆಂಬುದನ್ನು ಊಹಿಸುವಷ್ಟರಲ್ಲಿ 'ನಿಮ್ಮನೇಲಿ ಇರಲೂಬಹುದು, ಇಲ್ಲದೆಯೂ ಇರಬಹುದು ಸಾರ್. ಇದ್ದರೆ ಹೇಳಿ ಸಾರ್. ಇಲ್ಲದೇ ಇದ್ದರೂ ಪರವಾಗಿಲ್ಲ ಸಾರ್'

'ಇದೆಯಪ್ಪಾ'

'ಸರಸ್ವತಿ ಫೋಟೋ'

'ಅದೂ ಇದೆ'

'ಸರಸ್ವತಿ ಯಾವುದರ ಮೇಲೆ ಕೂತಿರ್ತಾಳೆ ಸಾರ್?'

'ಕಲ್ಲು ಬಂಡೆ ಮೇಲೇ'

'ಲಕ್ಷ್ಮಿ?'

'ತಾವರೆ ಮೇಲೇ'

'ಅದು ನಿಜವಾದ ತಾವರೇನಾ ಸಾರ್?'

'ಇನ್ನೇನು ಪ್ಲಾಸ್ಟಿಕ್‌ದು ಅಂದುಕೊಂಡೆಯಾ?'

'ಅದನ್ನೇ ಸರ್ ನಾನೂ ಕೇಳಬೇಕೂಂತ ಇದ್ದದ್ದು'

ಮುಂದಕ್ಕೆ ಡೈಲಾಗ್ ಎತ್ತೆತ್ತ ಹರಿಯಬಹುದೆಂದು ಅರ್ಥ ಆಗತೊಡಗಿತು. ಅಷ್ಟು ದೊಡ್ಡ ತಾವರೆ ಇರುತ್ಯೆ? ಇದ್ದರೂ ಲಕ್ಷ್ಮಿಯನ್ನು ಹೊರುವಷ್ಟು ಗಟ್ಟಿಯಾಗಿ ಇರುತ್ಯೆ?

ಅಷ್ಟು ಗಟ್ಟಿಯಾಗಿದ್ದರೆ ಅದು ಹೂವೋ ಅಥವಾ ಬಂಡೆಯೋ? ಇತ್ಯಾದಿ ಇತ್ಯಾದಿ. ಅವನ ಆ ಪ್ರಶ್ನೆಗಳಿಗೆಲ್ಲ ಪೂರ್ಣ ವಿರಾಮ ಹಾಕುವ ಬಗೆ? ಎಂದೋ ಹಿಂದೆಂದೋ ಓದಿದ್ದ 'ಇನ್ನೊಬ್ಬರ ಬಾಯಿ ಮುಚ್ಚಿಸುವುದು ಹೇಗೆ?' ಪುಸ್ತಕ ನನ್ನ ನೆರವಿಗೆ ಬಂತು. ಮೂಗಿನ ಮೇಲೆ ಬೆರಳಿಟ್ಟು 'ರಾಮಣ್ಣಾ, ಹುಟ್ಟಿದಾಗಿನಿಂದ ನಾನೂ ಆ ಫೋಟೋನ ನೋಡ್ತಾನೇ ಇದೀನಿ ನೋಡು. ನಿನಗೆ ಬಂದಂಥ ಆಲೋಚನೆಗಳು ನನಗೆ ಒಂದಿನಾನೂ ಬಂದಿಲ್ವಲ್ಲ! ಅಬ್ಬ, ಒಳ್ಳೊಳ್ಳೆ ಐನಾತಿ ಪಾಯಿಂಟ್‌ಗಳನ್ನೇ ಹಾಕಿದ್ದೀಯ. ನಾನೂ ಇದೀನಿ ಯಾಕೆ?' ಅಂತ ಸ್ವ-ನಿಂದನೆ ಮಾಡಿಕೊಂಡು ಅವನನ್ನು ವಂದಿಸಿದೆ. 'ದಟ್ಸಾಲ್ ಯುವರ್ ಆನರ್' ಅನ್ನೋವಂತೆ 'ಅಷ್ಟೆ ಸಾರ್ ತುಂಬಾ ಥ್ಯಾಂಕ್ಸ್ ಸಾರ್ ಬರ್ತೀನಿ' ಅಂದ. 'ಹೋಗಿ ಬಾಪ್ಪ' ಅಂತ ದೊಡ್ಡದಾಗಿ ಕೈ ಮುಗಿದೆ.

ಈಗ

'ಏನು ರಾಮಣ್ಣ?' ಕೇಳಿದೆ

ಅಷ್ಟರಲ್ಲೇ ಗೋಪಣ್ಣನೂ ಅವನ ಹಿಂದೆ ಬಂದು ನಿಂತಿದ್ದ. ಅಂದರೆ ಇಬ್ಬರೂ ಯಾವುದೋ ಬೆಟಿಂಗ್ಸ್ ಕಟ್ಟಿಕೊಂಡಿದ್ದಾರೆ, ಅಂತಲೇ ಅರ್ಥ.

'ನೋಡಿ ಸಾರ್, ಎಲ್ಲಾ ನೋಟೀಸ್ ಬೋರ್ಡ್‌ಗಳಲ್ಲೂ ಈ ಸ್ಲೋಗನ್ ಅಂಟಿಸಿದಾರೆ'

'ಯಾವುದೂ?'

'ಇದೇ ಸಾರ್' ಪಿನ್ ಮಾಡಿದ್ದ ಪೋಸ್ಟರ್ ಒಂದನ್ನು ನೋಟೀಸ್ ಬೋರ್ಡ್‌ನಿಂದ ಬಿಡಿಸಿಕೊಂಡು ಬಂದಿದ್ದ ಕಾಗದವೊಂದನ್ನು ಕೊಟ್ಟ. ಓದಿದೆ.

'ಗುಲಾಬಿಯೊಂದನ್ನು ಕೊಡಿ

ಕಂಬನಿಯೊಂದನ್ನು ಒರೆಸಿ'

'ಎಷ್ಟು ಚೆನ್ನಾಗಿದೆ?!' ಆಶ್ಚರ್ಯದಿಂದ ಹೇಳಿದೆ.

'ಏನು ಸಾರ್ ಚೆನ್ನಾಗಿರೋದು?'

'ಇದರರ್ಥ ರಾಮಣ್ಣ'

'ಏನ್ಸಾರ್ ಇದರರ್ಥ?'

'ಅಳ್ತಾ ಇರೋರಿಗೆ ಗುಲಾಬಿ ಕೊಟ್ಟು ಕಣ್ಣೀರನ್ನು ಒರೆಸಿ - ಅಂತ ತಾನೇ ಸಾರ್ ಅರ್ಥ?' ಗೋಪಣ್ಣ ಕೇಳಿದ. 'ಅಲ್ಲ ಅಲ್ಲ, ಪ್ರೀತಿಸೋರಿಗೆ ಗುಲಾಬಿ ಕೊಡಿ. ಅಳುವವರ ಕಣ್ಣೀರೊರೆಸಿ ಅಂತ ಅರ್ಥ. ಅಲ್ವಾ ಸಾರ್?' ರಾಮಣ್ಣ. 'ಎಲ್ಲಾದರೂ ಉಂಟೇ? ಒಂದು ಸ್ಲೋಗನ್‌ನಲ್ಲಿರೋ ವಿಷಯ ಒಬ್ಬರಿಗೇ ಅನ್ವಯಿಸೋದು ಅಂದರೆ, ಯಾರ ಕಣ್ಣಲ್ಲಿ ನೀರು ಬರ್ತಿದೆಯೋ ಅವರಿಗೆ ಗುಲಾಬಿ ಕೊಟ್ಟು ಕಣ್ಣೊರೆಸಬೇಕೂಂತ' - ಗೋಪಣ್ಣ. 'ಹಾಗಂತ ಕಾನೂನೇನಿಲ್ಲ. ಗುಲಾಬೀನ ಒಬ್ಬರಿಗೆ ಕೊಡಬಹುದು, ಇನ್ನೊಬ್ಬರ ಕಣ್ಣೀರನ್ನು ಒರೆಸಬಹುದು' - ರಾಮಣ್ಣ.

ಇವನು ನೋಡಿ ಸಾರ್. ಯಾವಾಗಲೂ ಹೀಗೆ ತರಲೆ' - ಗೋಪಣ್ಣ

'ಇದರಲ್ಲಿ ತರಲೆ ಏನು ಬಂತೂ? ಇರೋ ವಿಷಯಾನ ಹೇಳಿದೆ' - ರಾಮಣ್ಣ.

'ಹಾಗಂತ ಕಂಡೋರಿಗೆಲ್ಲ ಗುಲಾಬಿ ಕೊಡೋಕೆ ಹೋದರೆ ಕೆನ್ನೆ ಊದಿಸಿಕೋಬೇಕಾಗುತ್ತೆ ಗೊತ್ತಾ?' - ಗೋಪಣ್ಣ.

'ನೀವೇನು ಹೇಳ್ತೀರ ಸಾರ್?'

ರಾಮಣ್ಣ ಪ್ರಶ್ನೆ ಕೋಳೋಕೂ, ಗೋಪಣ್ಣ ಹೇಳಿದ್ದು ತಲೇಲಿ ಹೋಗೋಕೂ ತಾಳೆಯಾಯಿತು.

ತಲೆಯಲ್ಲಿ ಮಿಂಚು!

'ಹೌದಯ್ಯ; ಗೋಪಣ್ಣ ಹೇಳಿದ್ದು ಸರಿ' - ನಾನೆಂದೆ


'ಅಂದರೆ?' - ಇಬ್ಬರೂ ಒಟ್ಟಿಗೇ ಕೇಳಿದರು.

'ಅಂದರೇ, ಸ್ಲೋಗನ್‌ನಲ್ಲಿರೀ ಒಂದೊಂದು ಸಾಲೂ ಒಬ್ಬೊಬ್ಬರಿಗೆ, ಬೇರೆ ಬೇರೆಯವರಿಗೆ'

'ಅರ್ಥ ಆಗಲಿಲ್ಲ' - ರಾಮಣ್ಣ.

'ನೋಡೂ, ನೀನೂ ಒಬ್ಬಳಿಗೆ ಗುಲಾಬಿ ಕೊಡ್ತೀಯ್ಯ್ಯಾ ಅವಳು ನಿನ್ನ ಕೆನ್ನೆಗೊಂದು ಬಾರಿಸ್ತಾಳೆ. ಆಗ? ನಿನ್ನ ಕಣ್ಣಲ್ಲಿ ಕಂಬನಿ. ಇನ್ನೊಬ್ಬ ನಿನ್ನ ಕಣ್ಣೀರನ್ನು ಒರೆಸ್ತಾನೆ. ಅಂದರೆ ಗುಲಾಬಿ ಕೊಡಿ ಅಂತ ಒಬ್ಬರಿಗೆ ಹೇಳಿದರೆ, ಕಂಬನಿ ಒರೆಸಿ ಅಂತ ಇನ್ನೊಬ್ಬರಿಗೆ ಹೇಳಿದಹಾಗಾಯ್ತಲ್ಲಾ?' 'ಹೌದು ಹೌದು' ಅಂದ ಗೋಪಣ್ಣ.

'ಅದಕ್ಕೆ ದೊಡ್ಡವರನ್ನು, ತಿಳಿದವರನ್ನು ಕೇಳಬೇಕೂ ಅನ್ನೋದು' ಅಂತ ಇಬ್ಬರೂ ನಿರ್ಗಮಿಸಿದರು.



''ಉಪ್ಪಿಗಿಂತ....''

- ಶೀನೂ

ಮೂವತ್ತಾದರೂ ಮದುವೆಯಿಲ್ಲದೇ ಮುದುಕನಾದ ತಪ್ಪಿಗೆ, ಈ ನಿತ್ಯದ ಯಾತನೆ ನನಗೆ ಅಭ್ಯಾಸವಾಗಿ ಹೋಗಿದೆ.

ಆಫೀಸಲ್ಲಿ ಸಿಕ್ಕಾಪಟ್ಟೆ ದುಡಿದು ಊಟದ ಬಿಡುವಿನಲ್ಲಿ ಪಕ್ಕದ 'ಸುಗ್ರಾಸ ಭೋಜನಾಯಲಯ'ಕ್ಕೆ ಊಟಕ್ಕೆ ಹೋಗುತ್ತೇನೆ. ಅನೇಕ ದಿನಗಳ ಪರಿಚಯದಿಂದ; ಹಸಿವೆಯಿಂದ ಕಂಗೆಟ್ಟು ಬಾಡಿದ ನನ್ನ ವದನಾರವಿಂದವನ್ನು ನೋಡುತ್ತಲೂ ಭೋಜನಾಲಯದ ಮಾಣಿ ನನ್ನೆದುರು ಗ್ರಾಸದ ರೈಸ್ ಪ್ಲೇಟನ್ನು ಬಡಿಯುತ್ತಾನೆ. ನನ್ನೆದುರು ಬಂದ ರೈಸ್‌ಪ್ಲೇಟನ್ನು ನೋಡುತ್ತಲೂ, ಅದರ ವಾಸನೆ ಮೂಗಿಗೆ ಬಡಿಯುತ್ತಲೂ, ನನ್ನ ಕಣ್ಣು ಹನಿಗೂಡುತ್ತವೆ.

ಆ ತಗಡಿನ ಚಪಾತಿಯನ್ನೂ, ಕಟ್ಟಿಗೆ ತುಂಡುಗಳ ಪಲ್ಯವನ್ನು ಕಲಗಚ್ಚಿನ ಸಾಂಬಾರನ್ನೂ ನೋಡಿದೊಡನೆಯೇ, ನನ್ನ ಪ್ರಕ್ಷುಬ್ಧ ಜಠರಾಗ್ನಿಗೆ ಯಾರೋ ಒಂದು ಚೊಂಬು ಪವಿತ್ರಗೋಮೂತ್ರ ಪ್ರಧಾನವಾದ ಪಂಚಗವ್ಯ ಸುರಿದಂತಾಗುತ್ತದೆ. ಆಗೆಲ್ಲ ನಾನು ಗದ್ದಕ್ಕೆ ಕೈಯಿಟ್ಟು ಕಣ್ಣು ಮುಚ್ಚಿ ಧ್ಯಾನಸ್ಥನಂತೆ ಕುಳಿತುಬಿಡುತ್ತೇನೆ. ಅಕ್ಕಪಕ್ಕದವರು, ಇವನೇನೋ ಕವಳ ಪೂರ್ವದ ಮಂತ್ರಸ್ತೋತ್ರ ಪಠಿಸುತ್ತಿದ್ದಾನೆಂದುಕೊಳ್ಳುತ್ತಾರೆ. ಆದರೆ ನಿಜದಲ್ಲಿ ನಾನು ಕಣ್ಣುಮುಚ್ಚಿ ಆತ್ಮಗ್ಲಾನಿಯಿಂದ ಬಳಲುತ್ತ, ನನ್ನ ಕೆರದಿಂದ ನಾನೇ 'ರಪಾ ರಪಾ-ರಪಾ ರಪಾ' ಎಂದು ಬಾರಿಸಿಕೊಳ್ಳುತ್ತಿರುತ್ತೇನೆ.

ಏನೇ ಆಗಲಿ ಈ ಸಲ ವೈಶಾಖದಲ್ಲಿ ಮದುವೆ ಮಾಡಿಕೊಂಡೇ ಬಿಡುತ್ತೇನೆ ಎಂದು ನೂರನೆಯಸಲ ಎಂದುಕೊಳ್ಳುತ್ತೇನೆ. ಇತರೇ ಕಷ್ಟಸುಖಗಳು ಏನೇ ಇರಲಿ, ಏನಿಲ್ಲೆಂದರೂ ಈ ಸುಗ್ರಾಸದ ಗ್ರಾಸ ತಪ್ಪಿ ಮನೆಯ ಊಟವಾದರೂ ಸಿಕ್ಕೀತಲ್ಲ ಎಂದುಕೊಳ್ಳುತ್ತೇನೆ. ಮತ್ತೂ ಹೀಗೆಲ್ಲ ಯೋಚಿಸುತ್ತಿರುವಾಗ, ಒಂದು ಅಲಿಖಿತ ನಿಯಮವೇ ಏನೋ ಎಂಬಂತೆ, ಇಂತಹ ವಿಚಾರದ ಬೆನ್ನಿಗೇ ನನ್ನ ಆಫೀಸಿಗೆ ಮಿತ್ರ, ಎ.ಪಿ.ಹೆಚ್. ಸ್ವಾಮಿಯ ನೆನಪು ಬರುತ್ತದೆ. ಎ.ಪಿ.ಹೆಚ್. ಸ್ವಾಮಿಯ ಪೂರ್ತಿ ಹೆಸರು ಏನೋ ಯಾರಿಗೂ ತಿಳಿಯದು. ಆದರೆ ಆಫೀಸಿನಲ್ಲಿ ಎಲ್ಲರೂ ಅವನಿಗೆ 'ಅಪಹಾತಸ್ವಾಮಿ' ಎನ್ನುತ್ತಾರೆ.

ಅಪಹಾತಸ್ವಾಮಿಯ ಜೋಲುಬಿದ್ದ ಮೀಶೆಯಂತೆಯೇ ಅವನ ಹೂತುಹೋದ ಕಣ್ಣುಗಳಂತೆಯೇ, ಅವನ ದೈವಕೂಡ ಸೋತು ಹೋಗಿದೆ. ಅಪಹಾತ ಸ್ವಾಮಿಯನ್ನು ನೋಡಿದ ಯಾರಿಗಾದರೂ ಇವನ ಮುಖಕ್ಕೆರಡು ಇಕ್ಕರಿಸಿ ಮುಂದೆ ಹೋಗಬೇಕೆನಿಸುತ್ತದೆ. ಇರಲಿ.

ಅಪಹಾತಸ್ವಾಮಿ ಮಹಾ ''ಅಮ್ಮಾವ್ರಗಂಡ'' ಸ್ವಾಮಿ ಮೊದಲಿನಿಂದಲೂ ಇರುವದೇ ಹೀಗೆಯೇ ಅಥವಾ ಮದುವೆಯಾದಮೇಲೆ ಹೀಗಾದನೋ ಹೇಳುವದು ಕಷ್ಟ, ಅಂತೂ ಬೆಳಿಗ್ಗೆದ್ದು ಕಾಫಿ ಮಾಡಿ ಅಮಾವ್ರಿಗೆ ಕಟ್ಟು, ಸ್ನಾನ ಪೂಜೆ ಮುಗಿಸಿ,

ಅಡುಗೆ ಮಾಡಿ ಅಮ್ಮಾವ್ರಿಗೆ ಊಟಕ್ಕಿಕ್ಕಿ ಪಾತ್ರೆ ತೊಳೆದು ಆಫೀಸಿಗೆ ಬರುತ್ತಾನೆ. ಸಂಜೆ ಆಫೀಸು ಮುಗಿಯುತ್ತಲೂ, ಮನೆಗೆ ಓಡಿ ಮತ್ತೆ ಕಾಫಿ ತಿಂಡಿ ರಾತ್ರಿಯ ಊಟ ಉಡಿಗೆ ಮುಗಿಸಿ ಪಾತ್ರೆ ತಿಕ್ಕುತ್ತಾನೆ. ಈ ರೀತಿ ನಿಮಿಷ ಬಿಡುವಿಲ್ಲದೇ ಅಮ್ಮಾ ಅವರ ಸೇವೆಗೆ ತನ್ನನ್ನು ತಾನೇ ಮುಡಿಪಿಟ್ಟುಕೊಂಡಿದ್ದಾನೆ.

ರವಿವಾರ, ರಜಾದಿನಗಳಲ್ಲಿ ರಸೆಲ್ ಮಾರ್ಕೆಟ್‌ನಲ್ಲಿಯೋ, ಮಲ್ಲೇಶ್ವರಂ ಮಾರ್ಕೆಟ್‌ನಲ್ಲಿಯೋ ಸಂಜೆ ಮುಂಜಾವು ಕೈಯಲ್ಲಿ ಬೆತ್ತದ ಬುಟ್ಟಿ ಹಿಡಿದುಕೊಂಡು ಅಪಹಾತ, ಅಮ್ಮಾವ್ರ ಹಿಂದೆ ತರಕಾರಿ ಕೊಳ್ಳಲು ಅಡ್ಡಾಡುತ್ತಿದ್ದುದನ್ನು ನಾನೇ ಎಷ್ಟೋ ಸಲ ನೋಡಿದ್ದೇನೆ.

ಯಾವದೇ ಭಾರತೀಯ ನಾರಿಗಾದರೂ ಅಪಹಾತಸ್ವಾಮಿಯಂತಹ ಗಂಡ ಸಿಕ್ಕರೆ ಜನ್ಮ ಸಾರ್ಥಕವೆನಿಸಬೇಕು. ಆದರೆ ಸ್ವಾಮಿಯ ಹೆಂಡತಿಗೆ ಮಾತ್ರ ತೃಪ್ತಿಯೆಂಬುದೇ ಇಲ್ಲ. ಅವಳು ಅವನ ಏನೆಲ್ಲ ಸೇವೆಯನ್ನೂ ಸ್ವಾಹಾ ಮಾಡಿ, ಇನ್ನೂ ಬೇಕು ಮತ್ತೂ ಬೇಕೆಂಬ ರುದ್ರರೂಪಿಣಿಯಾಗಿದ್ದಳು. ಅಪಹಾತನ ಸೇವೆಯಲ್ಲಿ ಎಳ್ಳುಕಾಳು ಮುಳ್ಳು ಮೊನೆಯಷ್ಟು ಲೋಪವಾದರೂ ಅವನ ಪಾಲಿಗೆ ಅವಳು ಕಾಳಿಯೇ.

ಇದನ್ನೆಲ್ಲ ಆಫೀಸಿನಲ್ಲಿ ಸ್ವಾಮಿಯೇ ನನಗೆ ಹೇಳಿಕೊಂಡು ಅಳುತ್ತಿರುತ್ತಾನೆ. ಎಷ್ಟೇ ತತ್ಪರತೆಯಿಂದ ಅಡುಗೆ ಮಾಡಿದರೂ, ಒಮ್ಮೊಮ್ಮೆ ಅಡುಗೆಗೆ ಉಪ್ಪು ಹೆಚ್ಚೋ ಕಡಿಮೆಯೋ ಆಗಿಬಿಡುತ್ತದೆ. ಆಗೆಲ್ಲ ಅವನು ''ಸ್ಸಾರಿ,... ವ್ಹೆರಿ ಸ್ಸಾರೀರೀ.... ತಪ್ಪಾಯಿತು'' ಎನ್ನುವದೂ, ರುದ್ರರೂಪಿಣಿ ದರ್ಪದಲ್ಲಿ ''ಏನು ಹಾಗೆಸ್ಸಾರೀ' ಎಂದರೆ ನಾಚಿಗೆಯಾಗುವುದಿಲ್ಲವೇ? ಇನ್ನು ಮೇಲೆ ಹೀಗಾದರೆ ಪರಿಣಾಮ ಚನ್ನಾಗಿರದು ನೆನಪಿರಲಿ'' ಎನ್ನುವದೂ ನಡೆದೇ ಇತ್ತು. ಅದಾಗಿ ಮತ್ತೆ ಕೆಲವು ಸಲ ಅಡುಗೆಗೆ ಉಪ್ಪು ತಪ್ಪಿದಾಗ, ಅಮ್ಮಾವರು ಸಾಕ್ಷಾತ್ ಚಂಡಿಯೇ ಆಗಿದ್ದರು. ಆಗ ಅಪಾಹತ, ''ಈಸು ಕ್ಷಮಿಸಿಬಿಡಿ ಇನ್ನು ಮೇಲೆ ಹೀಗಾಗೊಲ್ಲ'' ಎಂದು ಯಜಮಾನರ ಕಾಲು ಹಿಡಕೊಂಡು ಬಚಾವಾಗಿದ್ದ.

ಅದಾಗಿ ಈಗೆಂಟು ದಿನಗಳ ಹಿಂದೆ ಮಧ್ಯಾನ್ಹದ ಕಾಫಿ ಬಿಡುವಿನಲ್ಲಿ ಅಪಹಾತಸ್ವಾಮಿ ಎಂದಿನಂತೆ ನನ್ನ ಬಳಿ ಬಂದು, ನಿರ್ವಿಣ್ಣ ದುಃಖತಪ್ತದನಿಯಲ್ಲಿ ''ನಿನ್ನೆ ಮತ್ತೆ ಸಾಂಬಾರಿಗೆ ಉಪ್ಪು ಹಾಕಲು ಮರೆತುಬಿಟ್ಟಿದ್ದೆ. ಯಜಮಾನರು ಕೋಪ ಮಾಡಿಕೊಂಡು ಕೆಂಡ ಉಗುಳಿಬಿಟ್ಟರು'' ಎಂದ.

ನಾನು ಅಸಹನೆಯಿಂದ, ''ನಿನಗೆ ಕೊಂಚವೂ ಆತ್ಮಗೌರವವಿಲ್ಲವೇ?' ಅಭಿಮಾನವಿಲ್ಲವೇ? ಇಷ್ಟೆಲ್ಲ ಮಾಡಿಯೂ ಹೀಗೆಲ್ಲಾ ಉಗಿಸಿಕೊಳ್ಳುತ್ತೀಯಲ್ಲ ನಿನಗೇನು ದೇವರು ಬಾಯಿ ಕೊಟ್ಟಿಲ್ಲವೇ?'' ಎಂದೆ.

ಅದಕ್ಕೆ ಅಪಹಾತ ''ಈ ಸಲ ನನಗೂ ವಿಪರೀತ ಕೋಪಬಂದು ನಾನೂ ಅಷ್ಟೇ ಸೀರಿಯಸ್ಸಾಗಿ 'ಇದೊಂದು ಸಲ ಕ್ಷಮಿಸಿಬಿಡಿ ಇನ್ನು ಮೇಲೆ ಹೀಗಾದರೆ ನನ್ನನ್ನು ಕೊಂದು ಹಾಕಿಬಿಡಿ' ಎಂದು ಖಾರವಾಗಿಯೇ ಹೇಳಿದೆ'' ಎಂದ.


ನಾನು ಹಣೆ ಬಡೆದುಕೊಂಡು ''ನಿನ್ನ ಖರ್ಮ! ನೀನು ಹಾಗೆ ಹೇಳಿದ್ದಕ್ಕೆ ನಿಮ್ಮ ಶ್ರೀಮತಿಯವರು ಏನು ಹೇಳಿದರು?'' ಎಂದು ಕೇಳಿದೆ.

''ಏನೂ ಹೇಳಲಿಲ್ಲ ಮುಗುಮ್ಮಾಗಿ 'ಸರಿ' ಎಂದರು ಅಷ್ಟೇ' ಎಂದ ಅಪಹಾತ.

ಈ ರಣಹೇಡಿ ಅಪಹಾತನ ರಗಳೆಯುನ್ನು ಕೇಳಿ ಕೇಳಿ ನನ್ನ ಮನಸ್ಸು ಬೇಸರಗೊಂಡಿತ್ತು. ಎರಡು ಮೂರು ದಿನಗಳಿಂದ ನಾನು ಅಪಹಾತಸ್ವಾಮಿಯನ್ನು ಬೇಕೆಂದೇ ಭೇಟಿಯಾಗಿರಲಿಲ್ಲ. ಪಾಪ ಹೇಗಿದ್ದಾನೋ ಏನೋ ಇವತ್ತು ಕಾಫಿ ಬಿಡುವಿನಲ್ಲಿ ನೋಡಿ ಮಾತನಾಡಿಸುತ್ತೇನೆ ಎಂದುಕೊಂಡು ''ಸುಗ್ರಾಸ ಭೋಜನಾಲಯದ''ದ ಮಾಣಿ ನನ್ನೆದುರು ಬಡಿದ ರಾಯಿಸ್ ಪ್ಲೇಟನ್ನು ನನ್ನ ಬಳಿಗೆ ಎಳೆದುಕೊಂಡೆ.

ಯಾರೋ ಜಠರಾಗ್ನಿಗೆ ಚೊಂಬು ಪಂಚಗಬ್ಯ ಸುರಿದದ್ದಾಯಿತು. ಆಮೇಲೆ ನಾನು ಕಣ್ಣುಮುಚ್ಚಿ ಕವಳಪೂರ್ವದ ''ರಪಾರಪಾರಪಾ'' ಸ್ತೋತ್ರಪಠಣ ಮುಗಿಸಿ, ಒಂದು ತುಂಡು ತಗಡನ್ನು ಮುರಿದು ಕಲಗಚ್ಚಿನಲ್ಲಿ ಅದ್ದಿ ಬಾಯಿಗಿಟ್ಟುಕೊಂಡು ಜಗಿಯತೊಡಗಿದೆ. ಇದ್ದಕ್ಕಿದ್ದಂತೆ ಅಪಹಾತಸ್ವಾಮಿಯ ನೆನಪು ತೀವ್ರವಾಗಿ ''ಗಕ್'' ಎಂದು ಗಂಟಲು ಕಟ್ಟಿ ಬಿಕ್ಕು ಬಂದಿತು. ನೀರು ಕುಡಿವೆನೆಂದರೆ ಲೋಟದಲ್ಲಿ ನೀರಿರಲಿಲ್ಲ. ಪಕ್ಕದ ಮೇಜಿನಿಂದ ನೀರಿನ ಹೂಜೆಯನ್ನೆತ್ತಿಕೊಳ್ಳುವೆನೆಂದು ಪಕ್ಕಕ್ಕೆ ಹೊರಳಿದೆ. ಆಗಲೇ ನನಗೆ ಘಾತವಾಯಿತು. ನನ್ನ ಎದೆ ಧಸಕ್ಕೆಂದಿತು. ಹೃದಯ ಬಾಯಿಗೆ ಬಂದಂತಾಯಿತು. ಡವ ಡವ ಗುಟ್ಟುತ್ತಿದ್ದ ಎದೆಯನ್ನು ಗಟ್ಟಿಯಾಗಿ ಹಿಡಿದುಕೊಂಡು, ನಖಶಿಖಾಂತ ಬೆವೆತು, ಬಿಟ್ಟ ಕಣ್ಣು ಬಿಟ್ಟು ಪಕ್ಕದ ಮೇಜಿನೆಡೆ ಇನ್ನೊಮ್ಮೆ ನೋಡಿದೆ.

ಪಕ್ಕದ ಮೇಜಿನಲ್ಲಿ ಅಪಹಾತ ಸ್ವಾಮಿಯ ಹೆಂಡತಿ ರುದ್ರರೂಪಿಣಿ ಕುಳಿತು ಊಟ ಮಾಡುತ್ತಿದ್ದಳು.



ಹಾಸ್ಯಬ್ರಹ್ಮ,

ಭಾರತೀಯ ವಿದ್ಯಾಭವನ ಹಾಗೂ

ವಾರ್ತಾ ಮತ್ತು ಪ್ರಚಾರ ಇಲಾಖೆ

ಕರ್ನಾಟಕ ಸರ್ಕಾರ

ಇವರುಗಳ ಸಂಯುಕ್ತ ಆಶ್ರಯದಲ್ಲಿ

''ಸಮೂಹ ಮಾಧ್ಯಮಗಳಲ್ಲಿ ಹಾಸ್ಯ: ಅಂದು - ಇಂದು''

ಎಂಬ ವಿಚಾರ ಸಂಕಿರಣವನ್ನು

ದಿನಾಂಕ: 13-9-98ರಂದು ಭಾನುವಾರ ಏರ್ಪಡಿಸಲಾಗಿದೆ.

ಉದ್ಘಾಟನೆ: ಶ್ರೀ ಐ.ಎಂ. ವಿಠ್ಠಲಮೂರ್ತಿ I.A.S.

(ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ)

ಅಧ್ಯಕ್ಷತೆ: ಶ್ರೀ ವಿ. ಶ್ರೀನಿವಾಸರಾಜು

(ಕಾರ್ಯಕ್ರಮ ನಿರ್ದೇಶಕರು, ಭಾರತೀಯ ವಿದ್ಯಾಭವನ)

ಭಾಗವಹಿಸುವವರು:

ಸರ್ವಶ್ರೀ

• ಜಿ.ವಿ. ಅಯ್ಯರ್ • ಹೆಚ್.ಕೆ. ರಂಗನಾಥ್ • ಸಿ. ಸೀತಾರಾಮ್

• ನಾಗಾಭರಣ • ಟಿ.ಎನ್. ಸೀತಾರಾಮ್

ನಿರ್ವಹಣೆ: ಶ್ರೀ ಅ.ರಾ. ಮಿತ್ರ

ಬನ್ನಿ, ಸಕ್ರಿಯವಾಗಿ ಪಾಲ್ಗೊಳ್ಳಿ

ಸಮಯ: ಬೆಳಿಗ್ಗೆ 10.30ಕ್ಕೆ

ಸ್ಥಳ: ಭಾರತೀಯ ವಿದ್ಯಾಭವನ

ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.

ಗವರ್ನ್‌ಮೆಂಟ್ ಆಫೀಸ್ನಲ್ಲಿ

- ನಾಗೂಶ್ರೀ ಸೂರಿ

ಕೇಳೋ ರೇಟು ಒಪ್ಪೊದಾದ್ರೆ
ಇರ್ಬೋದ್ ನೀವು ಇಲ್ಲಿ
ಹಿಂದೆ ಮುಂದೆ ನೋಡೋದಾದ್ರೆ
ಅಲ್ಲೆ ಬಾಗ್ಲಲ್ ನಿಲ್ಲಿ

ವರ್ಷವೆ ಆಯ್ತು ನಿಮ್ಮ ಫೈಲು
ನಮ್ಮ ಹತ್ರ ಬಂದು
ಯಾಕೆ ನೀವು ಬರಲೆ ಇಲ್ಲ
Follow-upಗೆ ಎಂದೂ?

ಹಾಕಿದ್ದೇವೆ ನಿಮ್ಮ ಕಡತಾ
ಇಲ್ಲೆ ಮೂಲೆ ಒಳಗೆ
ಸಾವ್ರಾ ಫೈಲು ಬಿದ್ದಿರ್ಬೋದು
ಅದ್ರ ಮೇಲೆ ಕೆಳಗೆ

ಮುಟ್ಬೋಕ್ಮುಂಚೆ ಫೈಲಿನ್ಮೇಲೆ
ಆಡಿಸ್ಬೇಕು ಪೊರಕೆ
ಅದ್ರ ಖರ್ಚು ಕೊಡ್ತೀನಂತ
ಹೊತ್ಕೋತೀರ ಹರಕೆ?

ಫೈಲನ್ನ ಬೇಗ ಜಾರ್ಸೋದಕ್ಕೆ
ಕೈಗೆ ಬೇಕು ಜಿಡ್ಡು
ಅದಕ್ಕೆ ಅಲ್ಲೆ ಕೇಳೋದ್ನಾವು
ಅಷ್ಟೋ ಇಷ್ಟೋ ದುಡ್ಡು?

ಸೀ ಬೀ ಐ ಗೆ ಹೇಳ್ತೀನಂತ
ಮಾಡೋದಾದ್ರೆ ಜಂಭ
ಫೈಲನ್ನಿಲ್ಲೆ ತಿಪ್ಪೇಗೆಸ್ದು
ಕೊಡ್ತೀವ್ ಕೈಗೆ ಚಂಬ

ಒಪ್ಪೋದಾದ್ರೆ ಹೋಗ್ಬೋದ್ ನೀವು
ಅಡ್ವಾನ್ಸ್ ಕೊಂಚ ಕೊಟ್ಟು
ಮುಗ್ಸಿರ್ತೇನೆ ನಿಮ್ಮ ಕೆಲಸ
ಬಂದ್ರೆ ತಿಂಗಳು ಬಿಟ್ಟು
(ರಾಜರತ್ನಂ ಅವರ ''ಬ್ರಹ್ಮ ನಿಂಗೆ ಜೋಡಿಸ್ತೀನಿ...'' ಪದ್ಯದ ಧಾಟಿಯಲ್ಲಿ)

(ಹೆಣ್ಣು) ಮಕ್ಕಳಿರಲವ್ವಾ....!

- ಬೇಲೂರು ರಾಮಮೂರ್ತಿ

ಅವತ್ತು ಸೀನಿ ತುಂಬಾ ಬೇಜಾರದಲ್ಲಿದ್ದ. ನೋಡಿದ್ರೆ ಯಾರಿಗಾದ್ರೂ ಅಯ್ಯೋ ಅನಿಸೋಹಾಗಿತ್ತು ಅವನ ಮುಖ. ಅಕ್ಕರೆಯಿಂದ ಯಾಕೋ ಏನಾಯ್ತೋ... ಅಂತ ಕೇಳಿ ಅಷ್ಟಕ್ಕೇ ನಿಲ್ಲಿಸ್ದೆ'' ಯಾಕೋ ನಿನ್ ಹೆಂಡ್ತಿ ಏನಾದ್ರೂ ಬಯ್ದ್ಲಾ'' ಅಂತ ಸೇರಿಸಿದೆ. ಕೂಡಲೇ ಉತ್ತರ ಬಂತು.

''ಹೆಂಡ್ತೀರಿಗೇನಯ್ಯ... ಗಂಡಂದಿರನ್ನ ಬಯ್ಬೇಕೂಂದ್ರೆ ನೂರು ಕಾರಣಗಳು ಬಂದು ಕ್ಯೂ ನಿಂತ್ಕೊಳುತ್ವೆ... ಯೇಕೆ ನಿನ್ ಹೆಂಡ್ತಿ ನಿನ್ನ ಬಯ್ಯಲ್ವಾ''

''ಛೆ...ಛೆ... ಅಂಥಾ ಕೆಲಸ ಅವಳು ಮಾಡೋದೇ ಇಲ್ಲ'' ಅಂದೆ. ''ಬೆಣ್ಣೆ ನನ್‌ಮಗ'' ಅಂತ ಬಯ್ದು ಸುಮ್ನಾದ ಸೀನಿ ಆದರೆ ಸೀನಿ ಡಿಪ್ರೆಷನ್‌ಗೆ ಕಾರಣ ತಿಳ್ಕೊಬೇಕಲ್ಲ... ಮತ್ತೆ ಮತ್ತೆ ಕೆದಕಿದೆ. ಅದಕ್ಕೆ ಸೀನಿ

''ಮನೇಲಿ ಹೆಣ್ ಮಕ್ಳಿರ್ಬೇಕಯ್ಯ'' ಅಂದ

ಹೆಣ್‌ಮಕ್ಳಿಲ್ಲಾನ್ನೋ ಬೇಜಾರು ಇದ್ಯಾಕೆ ಈಗ ಪ್ರಾರಂಭ ಆಯ್ತು. ನಮ್ ಯೋಗ್ಯತೆಗೆ ಎರಡೇ ಸಾಕು. ಅಂದು ಎರಡೂ ಗಂಡು ಮಕ್ಕಳಾದ ಮೇಲೆ ಸೀನೀನೇ ಸಾಕೂಂತ ಸ್ಟಾಪ್ ಮಾಡಿದಾನೆ.

''ಅದಕ್ಕೇನಂತೆ ಬಿಡು... ನಿನಗೂ ನಿನ್ ಹೆಂಡ್ತಿಗೂ ಯಾವ ಮಹಾ ವಯಸ್ಸಾಗಿದೆ''

''ಅದಲ್ಲಯ್ಯ ನನ್ ಪ್ರಾಬ್ಲಮ್ಮು... ಮನೆಂದ್ಮೇಲೆ ಒಂದು ಹೆಣ್ ಮಗು ಇರಬೇಕು''

''ಯಾರಿಲ್ಲಾಂದ್ರು! ಹೆಣ್ಣು ಹೊನ್ನು ಕುಡಿಕೆ ಅಲ್ವೆ... ಆದ್ರೆ ಈಗಿನ ಕಾಲ್ದಲ್ಲಿ ಅವಳ್ನ ಗಂಡನ ಮನೆಗೆ ಕಳಿಸೋಕೆ ಕುಡಿಕೆ ಏನು ಗಡಿಗೆಯಷ್ಟು ಹೊನ್ನಿದ್ರೂ ಸಾಲ್ದು... ಅಲ್ಲಯ್ಯ ಎಲ್ರೂ ಹೆಣ್‌ಮಕ್ಳು ಅಂದ್ರೆ ಹೊರೆ, ಜವಾಬ್ದಾರಿ, ತೊಂದ್ರೆ, ರಾಮಾಯಣ ಅಂತೆಲ್ಲ ಅನ್ನುವಾಗ ನಿಂಗ್ಯಾಕೆ ಸೀನಿ ಈ ಚಪಲ''

'ಏ ರಾಮಿ... ನೀನು ನನ್ನ ಸಮಸ್ಯೇಯೇ ಅರ್ಥಮಾಡ್ಕೊತಾ ಇಲ್ಲ.... ನನಗೆ ಈಗಿರೋ ಹೊರೆ ಗಮನಕ್ಕೆ ತಗೊಂಡ್ರೆ ನೀ ಹೇಳೋದು ಯಾವುದೂ ಹೊರೇನೇ ಅಲ್ಲ''

''ಹೌದಾ... ಯಾವುದಪ್ಪಾ ಈಗಿರೋ ಹೊರೆ''

''ಅಯ್ಯೋ ಸುಮ್ನಿರು... ಬಾಯಿಬಿಟ್ರೆ ಬಣ್ಣಗೇಡು ಅನ್ನೋ ಹಾಗಾಗಿದೆ ನನ್ ಸ್ಥಿತಿ''

''ನನ್ನ್ ಹತ್ರನೂ ಅಂಥಾದೇನಯ್ಯ ಬಿಗುಮಾನ... ಎಲ್ಲಾ ಹೇಳು ಏನಾದ್ರೂ ಪರಿಹಾರ ಇದ್ರೆ ಹುಡುಕೋಣ''

''ಪರಿಹಾರ ಅಂತೂ ಇದಕ್ಕೆ ಇಲ್ವೇ ಇಲ್ಲ. ಆದರೂ ನೀನು ಕೇಳ್ತಿದೀಯಲ್ಲ ಅಂತ ಹೇಳ್ತೀನಿ.... ಮನೇಲಿ ಹೆಣ್‌ಮಕ್ಕಳು ಯಾಕೆ ಇರಬೇಕೂಂತ ಹೇಳ್ದೆ ಗೊತ್ತಾ.. ಈಗ ನಿಮ್ಮನ್ಲಿ ನಿನ್ ಹೆಂಡ್ತಿ ಬಿಸ್ಸಿಯಾಗಿದ್ದಾಳೆ ಅಂದ್ರೆ ಮನೆ ಕಸ ಗುಡಿಸೋರು ಯಾರು?''

''ಇನ್ಯಾರು ನನ್ನ ಮಗಳು''

''ನಮ್ಮನ್ಲಿ ಅದನ್ನ ನಾನು ಮಾಡೋದು''

''ಏನು... ನಿನ್ ಹೆಂಡ್ತಿ ನಿನ್ ಕೈಲಿ ಕಸ ಗುಡಿಸಿಸ್ತಾಳಾ.. ಷೇಮ್ ಷೇಮ್ ಆನ್ ಹರ್ ಪಾರ್ಟ್''

''ಪಾರ್ಟೋ.. ಫುಲ್ಲೋ... ಒಂದ್ ವೇಳೆ ನಿನ್ ಹೆಂಡ್ತಿ ತಲೆನೋವು ಅಂತ (ನಾಟಕನಾದರೂ ಆಡಿ) ಮಲಗಿದರೆ ಅಡಿಗೆ ಮಾಡೋದು, ಊಟಕ್ಕೆ ಬಡಿಸೋದು... ಪಾತ್ರೆ ತೊಳೆಯೋದು ಇವನ್ನೆಲ್ಲ ಮಾಡೋದು ಯಾರು?''

''ಅದೆಲ್ಲ ನನ್ನ ಮಗಳೇಪ್ಪ''

''ನಮ್ಮನ್ಲಿ ನನ್ ಹೆಂಡ್ತಿ ನನ್ ಕೈಲಿ ಮಾಡಿಸ್ತಾಳೆ... ಜೊತೆಗೆ ಪಾತ್ರೆ ಜಿಡ್ಡು ಹೋಗೋ ಹಾಗೆ ವಿಮ್ ಬಾರ್ ಹಾಕಿ ತೊಳೀರಿ ಅಂತ ಅಕ್ಕಪಕ್ಕದ ನಾಲ್ಕಾರು ಮನೆಗಳಿಗಾದರೂ ಕೇಳೋ ಹಾಗೆ ಕಿರುಚ್ತಾಳೆ''

''ಸೀನೀ ದಿಸೀಸ್ ಟೂ ಮಚ್... ಆಮೇಲೆ ಇನ್ನೂ ಏನೇನು ಮಾಡಿಸ್ತಾಳೆ''

''ಯಾವುದು ಬಿಟ್ಟಿದಾಳೆ ಅಂತ ಹೇಳ್ಲಿ... ಬಟ್ಟೆ ಒಣಗಿಸಿದ್ದನ್ನು ತಂದು ಒಳಗೆ ಬಿಸಾಕ್ತಾಳೆ. ರೀ ಓದಿದ ಪೇಪರ್ನೇ ಎಷ್ಟ್ ಸಾರಿ ಓದ್ತೀರ.. ಬಟ್ಟೆಗಳನ್ನ ಮಡಿಸಿಡಿ ಅಂತಾಳೆ. ಅದರಲ್ಲಿ ಅವಳ ಸೀರೆ ಅದರ ಮ್ಯಾಚಿಂಗ್‌ನ ಇತರೆ ಉಡುಪುಗಳೆಲ್ಲ ಇರುತ್ತೆ.. ಇನ್ನು ತರಕಾರಿ ಹೆಚ್ಚೋದು, ಹಾಲು ಕಾಯಿಸೋದು ಎಲ್ಲ ಮಾಮೂಲಿ.''

ಸೀನಿ ಡಿಪ್ರೆಷನ್‌ಗೆ ಬಲವಾದ ಕಾರಣನೇ ಇತ್ತು.

ಇದು ಅವರ ಮನೆ ಸಮಸ್ಯೆ. ಹೀಗಾಗಿ ಇದಕ್ಕೆ ಯೂನಿವರ್ಸಲ್ ಸೆಲ್ಯೂಷನ್ ಹುಡುಕೋದು ಕಷ್ಟ.

''ಅಲ್ಲ ಸೀನಿ... ನಿನ್ ಹೆಂಡ್ತಿ ಇದನ್ನೆಲ್ಲ ಮಾಡಿಸುವಾಗ ನೀನು ಪ್ರತಿಭಟನೆ ಅದೂ ಇದೂ..''

''ಎಂಥದೂ ಇಲ್ಲಕಣಯ್ಯ. ಒಂದ್ಸಾರಿ ಒಂಚೂರು ರಾಗ ತೆಗೆದಿದ್ದಕ್ಕೆ ''ಸುಮ್ನೆ ಮಾಡ್ರಿ... ಇದೇನು ಮಾರ್ಯಾದೆ ಹೋಗೋ ಕೆಲಸ ಅಲ್ಲ. ನಾನೇನು ಕೊಲೆ ಮಾಡಕ್ಕೆ

ಹೇಳಿದ್ನಾ ಇಲ್ಲಾ ಕಳ್ಳನ ಮಾಡಕ್ಕೆ ಹೇಳಿದ್ನಾ ಅಂದಳು. ಆಯ್ತಲ್ಲ ಅಲ್ಲಿಗೆ. ಮೊನ್ನೆ ಏನಾಯ್ತುಗೊತ್ತಾ... ಮನೆಗೆ ಯಾರ್‍ಯಾರೋ ಬಂದಿದಾರೆ. ಅವರೆದುರಿಗೇ ''ಒಂಚೂರು ಕಾಫಿಗೆಸ್ಟೌಮೇಲೆನೀರಿಡ್ರಿ'' ಅನ್ನೋದಾ... ಅಲ್ಲನಾ ಹೇಳೋದೇನೂಂದ್ರೆ ಮನೇಲಿ ಒಂದ್ ಹೆಣ್ ಮಗು ಇದ್ದಿದ್ರೆ ಇವೆಲ್ಲ ನನ್ ತಲೆಗೆ ಬರ್ತಿತ್ತಾ ಹೇಳು.''

ನನ್ ಹತ್ರ ಈ ಸಮಸ್ಯೆಗೆ ತಕ್ಷಣ ಉತ್ತರ ಇರ್ಲಿಲ್ಲ.

''ಈ ಕೆಲಸ ಎಲ್ಲ ನಿನ್ ಮನೇಲಿ ನಿನ್ ಹೆಂಡ್ತಿ ಬಿಟ್ರೆ ನಿನ್ನ ಮಗಳೇ ತಾನೇ ಮಾಡೋದು ಅದಿಕ್ಕೇ ಹೇಳೋದಯ್ಯ ಮನೇಲಿ ಹೆಣ್ ಮಕ್ಕಳಿರಬೇಕೂಂತ.''

ತುಂಬಾ ಹೊತ್ತಾದ ಮೇಲೆ ಹೇಳಿದೆ

''ಸೀನಿ... ಯಾವುದಾದರೂ ಸಮಸ್ಯೆಗೆ ಪರಿಹಾರ ಸಿಗ್ದೇ ಹೋದ್ರೆ ಆ ಸಮಸ್ಯೆನೇ ವಾಸ್ತವಸ್ಥಿತಿ ಅಂದ್ಕೊಂಡು ಅಡ್ಜಸ್ಟ್ ಮಾಡ್ಕೊಂಡ್ ಹೋಗಿಬಿಡಬೇಕು. ಇಲ್ದಿದ್ರೆ ತುಂಬಾ ಕಷ್ಟ ಅಲ್ಲ. ಸಮಸ್ಯೇನ ಅರಗಿಸ್ಕೊಳೋಕೂ ಆಗ್ದೇ... ಅದಕ್ಕೆ ಪರಿಹಾರನೂ ಇಲ್ದೇ ಹೋದ್ರೆ ವೀಕ್‌ನೆಸ್ ಹೆಚ್ಚಾಗುತ್ತೆ ಅದರಿಂದ ಏನ್ ಬೇಕಾದರೂ ಆಗಬಹುದು ಅಲ್ವಾ.''

''ನೀ ಹೇಳೋದು ಕರಕ್ಟೇ... ನಾನೂ ಹಾಗೇ ಅಡ್ಜಸ್ಟ್ ಮಾಡ್ಕೊಂಡು ಹೋಗ್ತಾ ಇದೀನಿ ಏನೋ ನೀನು ಯಾಕೆ ಹೀಗಿದೀಯ ಅಂತ ಕೇಳಿದ್ಯಲ್ಲ ಅದಕ್ಕೆ ಹೇಳ್ದೆ''

ಮಧ್ಯಾನ್ಹ ಲಂಚ್ ಟೈಮಲ್ಲಿ ಸೀನಿ ನನ್ನ ಡಬ್ಬಿಗೆ ಇಷ್ಟು ಅವರೇಕಾಳು ಉಪ್ಪಿಟ್ಟು ಹಾಕಿ

''ಟೇಸ್ಟ್ ನೋಡು ನಾ ಮಾಡಿದ್ದು'' ಅಂದ

ನಾನು ಟೇಸ್ಟು ನೋಡಿ ''ಇದು ನೀ ಮಾಡಿದ್ದಲ್ಲ'' ಅಂದೆ

ಸೀನಿ ಬೆಪ್ಪಾದ

''ನಾ ಹೇಳಿದ್ದು ನಿನ್ ಹೆಂಡತಿ ನಿನ್ ಕೈಲಿ ಮಾಡಿಸಿದ್ದು'' ಅಂದೆ

ಸೀನಿ ಒಂಥರಾ ನಕ್ಕ

''ಬೆಣ್ಣೆ ನನ ಮಗ... ಮನೇಲಿ ಒಂದು ಹೆಣ್ ಮಗಳಿದಾಳೆ ಅಂತ ಬೀಗ್ತಾನೆ... ಅವಳ್ನ ಮದ್ವೆ ಮಾಡಿ ಕಳಿಸಿಕೊಟ್ಮೇಲೆ ನಿಂಗೂ ಇದೇ ಗತಿ ಬರುತ್ತೆ.''

ಅಂದು ಬೇಗ ಬೇಗ ಉಪ್ಪಿಟ್ಟು ತಿಂದ

ಸಧ್ಯ ಸೀನಿಗತಿ ನಂಗೆ ಬರದಿರಲಪ್ಪಾ ಅಂತ ಅಂದ್ಕೊಂಡು ಬೇಗ ಬೇಗ ಊಟ ಮುಗಿಸಿದೆ.

ಕತ್ತೆ ಪ್ರವಚನ

- ಎಂ.ಎಸ್.ಕೆ.

ಒಂದೂರು. ಅದಕ್ಕೊಬ್ಬ ರಾಜ. ಜೊತೆಗೆ ಮಂತ್ರಿ. ಆ ರಾಜ ಬೇಕಾದಷ್ಟು ದಂಡೆಯಾತ್ರೆಗಳನ್ನು ಮಾಡಿ ತನ್ನ ಬೊಕ್ಕಸ ಮತ್ತು ಅಂತಃಪುರ ಎರಡನ್ನೂ ತುಂಬಿಸಿಕೊಂಡಿದ್ದ. ಇದೆಲ್ಲ ಮಾಮೂಲೇ ತಾನೇ.

ಆ ಊರಲ್ಲೊಬ್ಬ ಪಂಡಿತ. ಎಲ್ಲಾ ಪಂಡಿತರಂತೆ ಅವನಲ್ಲೂ ಬೇಕಾದಷ್ಟು ಚಪಲಗಳು ಮತ್ತು ಚೇಷ್ಟೆಗಳು ತುಂಬಿಕೊಂಡಿದ್ದವು.

ಒಂದ್ಸಲ ಅವನ ಚೇಷ್ಟೆಗಳು ಮಿತಿಮೀರಿದಾಗ ಬಂತು ರಾಜನಿಂದ ಬುಲಾವ್. Enquiry ಆದಮೇಲೆ ರಾಜ ಅವನಿಗೆ ಮರಣದಂಡನೆ ವಿಧಿಸಿದ. ರಾಜಭಟರು ಅವನನ್ನು ವಧಾಸ್ಥಾನಕ್ಕೆ ಎಳೆದುಕೊಂಡು ಹೋದರು. ಎಷ್ಟಾದರೂ ಪಂಡಿತ. ಒಂದು ಪ್ಲಾನ್ ಮಾಡಿದ. ಗಟ್ಟಿಯಾಗಿ ಗಹಗಹಿಸಿ ನಗಲು ಶುರಹಚ್ಚಿದ.

''ಅಯ್ಯೋ ಪಾಪ. ಸಾಯೋ ಹೆದರಿಕೇಲಿ ಇವನಿಗೆ ಹುಚ್ಚು ಹಿಡೀತು'' ಅಂದರು ರಾಜಭಟರು. ''ಅಲ್ರಯ್ಯಾ. ಹುಚ್ಚು ಹಿಡಿದಿರೋದು ನಿಮ್ಮ ರಾಜನಿಗೆ, ನಂಗಲ್ಲ. ಕೇವಲ 15 ದಿನದಲ್ಲಿ ಒಂದು ಕತ್ತೆ ಬಾಯಲ್ಲಿ ಗೀತೆ ಹೇಳಿಸೋಂಥ ಪಂಡಿತನ ನಾನು. ನನ್ನನ್ನೇ ಸಾಯಿಸ್ತಿದಾನಲ್ಲ ನಿಮ್ಮ ರಾಜ. ನೀವೇ ಹೇಳಿ ಹುಚ್ಚು ನಂಗೋ ಅವನಿಗೋಂತ'' ಅಂದ ನಮ್ಮ ಪಂಡಿತೋತ್ತಮ.

ಆ ರಾಜಭಟರು ತುಂಬಾ Confuse ಆಗಿ ಹೋದರು. ''ಇದು ನಮಗೆ ಗೊತ್ತೇ ಇರಲಿಲ್ಲವಲ್ಲ'' ಅಂದರು ಅವರು. ''ಭಾವೀಲಿರೋ ಕಪ್ಪೆಗಳು ನೀವು. ಹೊರಗಿನ ಪ್ರಪಂಚ ನಿಮಗೇನು ಗೊತ್ತು'' ಅಂದ ನಮ್ಮ ಪಂಡಿತ.

ಒಬ್ಬ ರಾಜನ ಹತ್ತಿರ ಓಡಿಹೋದ ವಿಷಯ ರಿಪೋರ್ಟ್ ಮಾಡಕ್ಕೆ. ರಾಜ ತನ್ನ ಅಂತಃಪುರಕ್ಕೆ ಹೋಗೋ ಅವಸರದಲ್ಲಿದ್ದ. ಈ ವಿಷಯ decide ಮಾಡಕ್ಕೆ ತನ್ನ ಮಂತ್ರಿಗೆ delegate ಮಾಡಿ ಹೊರಟುಹೋದ.

ಮಂತ್ರಿ ಹಳೆಕಾಲ್ದೋನು. ನಮ್ಮ ಪಂಡಿತನ ದೋಸ್ತ್ ಬೇರೆ. ಒಳ್ಳೇ ಗುಳ್ಳೇನರಿ. ರಿಪೋರ್ಟ್ ನಿಧಾನವಾಗಿ ಫುಲ್ಲಾಗಿ ಕೇಳಿದ. ಡೌಟ್ ಬರೋಕಡೆ questions ಹಾಕೀ ಹಾಕೀ ತಿಳ್ಕೊಂಡ. ಪಂಡಿತನ ಪ್ಲಾನ್ ಚೆನ್ನಾಗಿ ಅರ್ಥ ಆಯಿತು ಅವನಿಗೆ ತಲೆದೂಗಿದ. ಮನಸ್ಸಿನಲ್ಲೇ ಶಹಭ್ಬಾಶ್ ಅಂದ್ಕೊಂಡ.

''ಒಂದು ಕತ್ತೇನೂ ಈ ಪಂಡಿತನ್ನೂ ಜೈಲ್ ಲೀ ಒಂದೇ ರೂಂ ಅಲ್ಲಿ ಕೂಡಿ ಹಾಕಿ. ಒಂದು ವಾರವಾದ ಮೇಲೆ ಆ ಕತ್ತೆ ಏನಾದರೂ ಮಾತಾಡಿದರೆ ನನ್ನ ಹತ್ತಿರ ಕರ್ಕೊಂಬನ್ನಿ. ಇಲ್ಲದಿದ್ದರೆ ಕತ್ತೇನೂ ಅವನನ್ನೂ ಕೊಂದು ಒಂದೇ ಕಡೆ ಹೂತ್ಬಿಡಿ'' ಅಂತ ಆರ್ಡರ್ ಮಾಡಿದ.

ಸರಿ ಅರಮನೆ ಅಗಸನ ಕತ್ತೇನೂ ಈ ಪಂಡಿತನನ್ನೂ ಒಂದೇ ರೂಂ ಲೀ ಕೂಡುಹಾಕಿದರು.

ಇಂಥಾ ಸಮಾಚಾರಾನಾ ಮುಚ್ಚಿಡೋಕಾಗುತ್ತಾ? ಸಾಧ್ಯವೇ ಇಲ್ಲ. ಕೆಲವೇ ನಿಮಿಷಗಳಲ್ಲಿ ಊರೂರು, ಕೇರಿ ಕೇರಿಗಳಲ್ಲಿ ಟಾಂ ಟಾಂ ಆಗಿಹೋಯಿತು. ಜನ ಬಂದ್ರು. ಬಂದೇ ಬಂದ್ರು. ನಡ್ಕೊಂಡು ಬಂದ್ರು. ಎತ್ತಿನ ಗಾಡೀಲಿ ಬಂದ್ರು. ಉಳ್ಳವರು ಕುದುರೆಗಳ ಮೇಲೆ ಬಂದ್ರು. ಕಿಕ್ಕಿರಿದು ಸೇರಿದರು ಆ ಜೈಲ್ ಮುಂದೆ. ಜನರ ಜೊತೆ ಬಂತು ರೂಮರ್ಸ್. ಗುಜು ಗುಜು ಶುರು ಆಯ್ತು. ಅಂತೆ ಕಂತೆಗಳು ಫ್ರೀ ಆಗಿ circulate ಆಯ್ತು. ಜೈಲರ್ಸ್‌ನ ಇಂಟರ್ವ್ಯೂ ಮಾಡಿದವರು "ಆ ಕತ್ತೆ ಆಗಲೇ ಒಂದೆರಡು ಮಾತಾಡುದಕ್ಕೆ ಶುರುಮಾಡಿದೆಯಂತೆ" ಅಂತ ಗುಟ್ಟಾಗಿ ಎಲ್ಲರಿಗೂ ಹೇಳಿದರು.

ಬಂದರು ಜ್ಯೋತಿಷಿಗಳು. ಒಬ್ಬ ಅಂದ "ಅದು ಸಾಧಾರಣ ಕತ್ತೆ ಅಲ್ಲ. ಹಿಂದಿನ ಜನ್ಮದಲ್ಲಿ ಅದು ಒಬ್ಬ ವಿದ್ವಾಂಸನಾಗಿದ್ದ. ಶಾಪಗ್ರಸ್ಥನಾಗಿ ಕತ್ತೆಯಾಗಿ ಹುಟ್ಟಬೇಕಾಯ್ತು."

ಅವನ competitor ಜ್ಯೋತಿಷಿ ಸುಮ್ಮನಿರುತ್ತಾನಾ? ಅವನಂದ "ಇವನೊಬ್ಬ ಢೋಂಗಿ. ಅವನ ಮಾತ್ಕೇಳ್ಬೇಡಿ. ನಾನು ಆ ಪಂಡಿತನ ಕುಂಡಲಿ study ಮಾಡಿದ್ದೇನೆ. ಅವನು ತನ್ನ ಹಿಂದಿನ ಜನ್ಮದಲ್ಲಿ ಒಬ್ಬ ಪವಾಡ ಪುರುಷನಾಗಿದ್ದ. ಅವನಲ್ಲಿ ಸುಗ್ರೀವನ ಅಂಶ ಇದೆ. ಅವನು ಎಷ್ಟೋ ಕೋತಿಗಳ ಬಾಯಲ್ಲಿ ಪುರಾಣ ಹೇಳಿಸಿದ್ದಾನೆ" ತಲೆದೂಗಿದರು ಸಜ್ಜನರು ಈ ಮಾತನ್ನು ಕೇಳಿ.

ಬಹಳಷ್ಟು ಜನ straight from the ass's mouth ಏನಾದರೂ ಬಂತಾ ಅಂತ ಜೈಲರ್ಸ್ನ ಕೇಳಿದ್ದೂ ಕೇಳಿದ್ದೇ. ಅವರು ತಲೆ ಅಲ್ಲಾಡಿಸಿದ್ದೂ ಅಲ್ಲಾಸಿದ್ದೇ.

ಈ ಸಮಾಚಾರ ಆ ಊರಿನಲ್ಲಿದ್ದ ಇತರೇ ಪಂಡಿತರುಗಳ ಮನೆಗಳಲ್ಲಿ ಅಶಾಂತಿಯ ಅಲೆಗಳನ್ನು ಎಬ್ಬಿಸಿತು. "ನೋಡಿದ್ರೇನ್ರೀ. ಕೇಳಿದ್ರೇನ್ರೀ ಅವನ ಪ್ರತಾಪ. ಇನ್ನು ನಾನು ಅವನ ಹೆಂಡತಿ ಮುಂದೆ ತಲೆ ಹೇಗ್ರೀ ಎತ್ತಿ ನಿಲ್ಲೋದು? ಅವನನ್ನು ನೋಡಿ ಕಲೀಬಾರ್ದೇನ್ರೀ ನೀವೂ" ಅಂತ ತಮ್ಮ ಗಂಡಂದಿರ ಮುಖ ಮುಖ ತಿವಿದರು ಶ್ರೀಮತಿ ಪಂಡಿತರುಗಳು. ಆ ಗಂಡಂದಿರು ತಲೆ ತಗ್ಗಿಸಿಕೊಂಡು ಗಥಾಪುರಾಣಗಳನ್ನು ಓದಲು ಶುರು ಹಚ್ಚಿದರು. ಏನಾದರೂ inspiration ಸಿಕ್ಕುತ್ತೋ ಅಂತ.

ಅವರಲ್ಲೊಬ್ಬನಿಗೆ ಅವನ ಹೆಂಡತಿ ನ್ಯಾಗಿಂಗ್ ಎಷ್ಟಾಯಿತೆಂದರೆ ಅವನಿಗೆ ತಡೀಲಾರದೆ "ಇಲ್ನೋಡೇ. ಅವನ್ದೇನ್ ಮಹಾ ಪವಾಡ. ನನ್ನ ಪವಾಡ ಕೇಳು. ನಾನು ನಿನ್ನ ಮದುವೆಯಾದಾಗ ನೀನು ಒಳ್ಳೆ ಮೂದೇವಿ ಥರ ಇದ್ದೇ. ನಿನ್ನ ಹೆಂಡತಿ ಮೂಗಿ ಅವಳಿಗೆ ಮಾತೇ ಬರಲ್ಲ ಅಂತಿದ್ದರು ನನ್ನ ಅಪ್ಪ ಅಮ್ಮ. ಈಗ ನೋಡು ನೀನು ಹೇಗಿದ್ದೀ. ಪಟಪಟಾಂತ ಆನೇ ಪಟಾಕಿ ಥರ ಒಂದೇ ಸಮನೆ ಮಾತಾಡ್ತಿದ್ದೀ. ಇದಕ್ಕಿಂತ ದೊಡ್ಡ ಪವಾಡ ಬೇಕಾ? ಆ ಕತ್ತೇ ನಿನ್ನ ಥರ ಮಾತಾಡಿತ್ತಾಂತ ನೋಡ್ಕೊಂಡು ಬಾ" ಅಂತ್ಹೇಳಿ ಊರಿನ ದೇವಸ್ಥಾನಕ್ಕೆ ಹೋಗಿ ಕೂತ್ಕೊಂಡನಂತೆ. "ಇಂಟಿಗಿನ್ನಾ ಗುಡೀನೇ ಶಾಂತಮು" ಅಂತಾರಲ್ಲಾ ಅದಕ್ಕೇ.

ಏತನ್ಮಧ್ಯೆ ನಮ್ಮ ಜೈಲ್ ಪಂಡಿತನ ಹೆಂಡತಿ ಜೈಲ್‌ಗೇ ಬಂದು ಕೂಗಾಡಿದಳಂತೆ. ''ಇದೇನ್ರೀ ನಿಮ್ಮ ಅವಾಂತರ. ನಿಮಗೇ ಗೀತೇ ಬರೋಲ್ಲಾ. ಇನ್ನು ಕತ್ತೇಗೆ ಏನ್ರೀ ಹೇಳ್ಕೊಡ್ತೀರಾ? ಎಲ್ಲ ನನ್ನ ಕರ್ಮ. ಇನ್ನು ಮಕ್ಕಳ ಗತಿಯೇನೂ'' ಅಂತ ತಲೇ ತಲೇ ಚಚ್ಚಿಕೊಂಡಳು.

ಅವನು ಶಾಂತನಾಗಿ ''ಘಟ್ಟಿಯಾಗಿ ಕೂಗ್ಬೇಡ್ವೇ. ಇವಾಗೇನಾಯ್ತು? ನನಗೇ ಇನ್ನೂ 7 ದಿನ ಟೈಂ ಇದೆ. ಈ ಏಳು ದಿನದಲ್ಲಿ ಏನಾದ್ರೂ ಆಗಬಹುದು. ನಾನು ಸಾಯಬಹುದು, ಆ ರಾಜ ಸಾಯಬಹುದು, ಪ್ರಳಯ ಆಗಬಹುದು, ಭೂಕಂಪ ಆಗಿ ಈ ಜೈಲ್ ಬಿದ್ದುಹೋಗಬಹುದು. ನಮ್ಮ ರಾಜನ ಶತ್ರುಗಳು ಬಂದು ನಮ್ಮ ರಾಜನನ್ನು ಸೋಲಿಸಿ ನನ್ನನ್ನು ಬಿಡುಗಡೆ ಮಾಡಬಹುದು. ಇದೇನೂ ಆಗದಿದ್ದರೆ ಈ ಕತ್ತೆ ವಿಷ ತಿಂದು ಸಾಯಬಹುದು. ಸುಮ್ಮನೆ ಕಿರಿಚಾಡಬೇಡ.

ಈಗ ನನ್ನ ಕಷ್ಟ ನೋಡು. ಕತ್ತೆ ಗಬ್ಬುನಾಥ ಬಿಡುತ್ತಿದೆ. ಇದರ ಜೊತೆ ಹೇಗಪ್ಪ ಒಂದು ವಾರ ಕಳೆಯೋದೂಂತ ಭಯ ಆಗಿದೆ. ಒಂದು ಕೆಲಸ ಮಾಡು. ಮನೇಲಿರೋ ಅಗರಬತ್ತೀನೆಲ್ಲ ತಂದುಕೊಡು. ಈ ವಾಸನೆ ಸ್ವಲ್ಪಾನಾದ್ರೂ ಕಮ್ಮೀ ಆಗಬಹುದು. ಈಗ ಸ್ವಲ್ಪ ಕಿವೀಲಿ ಕೇಳು. ಆ ಬಚ್ಚಲಮನೇಲಿರೋ ಇಲೀ ಪಾಷಾಣಾನೆಲ್ಲಾ ಮೆತ್ತಗೆ ಯಾರಿಗೂ ಗೊತ್ತಾಗದಂತೆ ತಂದುಕೊಡು. ಯಾರಿಗೂ ಗೊತ್ತಾಗಕೂಡದು. ಹುಶಾರ್ ಅಂತ ಬೀಳ್ಕೊಟ್ಟ.

ಆ ಕತ್ತೆ ಸತ್ಮೇಲೆ ಅಲ್ಲಿನ ರಾಜಭಟರನ್ನು ಸಸ್ಪೆಂಡ್ ಮಾಡಿದ ಆ ಮಂತ್ರಿ. ಆ ಪಂಡಿತನನ್ನು ಕಂಡೀಶನ್ ಮೇಲೆ ಜಾಮೀನಿನ ಮೇಲೆ ಬಿಟ್ಟು ಆ ಕತ್ತೆ ಸಾವಿಗೆ ಕಾರಣಗಳನ್ನು ಕಂಡುಹಿಡಿಯಲು ಒಂದು ಕಮೀಶನ್ ನೇಮಿಸಿ ಒಂದು ವಾರದೊಳಗೆ ವರದಿ ಒಪ್ಪಿಸಲು ಆಜ್ಞೆ ಮಾಡಿದ.

ನೀತಿ: It is nice to know people in high places.



ಕಾವೇರೀ ನೀರು ಬುಡ್ತೀವಿ,
ನೀವೇ ದೇಸ ಆಳಿ ಅಂತ
ಏಳ್ಬಿಡೋವ

ಬುಲ್‌ಟನೇಶ್ವರೀ....

(ಭುವನೇಶ್ವರಿ ಕ್ಷಮಿಸಲಿ)

- ಎಚ್. ಗೋಪಾಲಕೃಷ್ಣ

ಒಂದೊಮ್ಮೆ ಬುಲೆಟಿನ್‌ಗಳನ್ನು ಕುರಿತು ತಮ್ಮನ್ನು ಕೊರೆಯುವುದಾಗಿ ಹೆದರಿಸಿದ್ದೆ ನಾನು, ನೆನಪಿದೆಯೇ? ಬಿ-ರೆಡಿ ಈಗ ನಿಮ್ಮ ಕಿವಿ ನನಗೆ ನೀಡಿ ಕಣ್ಣು ಮುಚ್ಚಿ ಕೂಡಿ - ಕೊರೆತಕ್ಕೆ ತಯಾರಾಗಿ.

ಸರಕಾರಿ ವರದಿಗಳಿಗೆ (ಅಂದರೆ ಅಫಿಷಿಯಲ್ ರಿಪೋರ್ಟ್) ಬುಲೆಟಿನ್(Bulletin) ಎಂದು ಹೆಸರಂತೆ. ಮೊದಮೊದಲು ಕಾರ್ಖಾನೆಗಳಲ್ಲಿ ಈ ಪದ ಬಹಳ ಚಾಲ್ತಿಯಲ್ಲಿತ್ತು - ಕಾಮಿರಕ ಸಂಘಟನೆಗಳು ಹೊರಡಿಸುವ ಸುದ್ದಿಪತ್ರಗಳಿಗೆ ಈ ಹೆಸರು ಹಿಡಿದು ಕರೆಯಲಾಗುತ್ತಿತ್ತು. ಈ ಪದದ ಬಳಕೆ ಮತ್ತು ಅರ್ಥ ವಿಶಾಲವಾದ ಹಾಗೆ ಸುಳ್ಳುಸುದ್ದಿಗಳಿಗೆ, ಬುರುಡೆಗಳಿಗೆ ಮತ್ತು ಬೂಸಿಗಳಿಗೂ ಸಹ ಬುಲೆಟಿನ್ ಎಂಬ ಪದ ವ್ಯಂಗಾರ್ಥವಾಗಿ ಬಳಕೆಯಾಗತೊಡಗಿತು. ಕೆಲವು ಸಲವಂತೂ ಬಾತ್‌ರೂಂ ಬುಲೆಟಿನ್ ಎಂಬ ಹೆಸರೇ ಸಾಧಾರಣ ಬುಲೆಟಿನ್‌ಗಳಿಗೂ ಅನ್ವರ್ಥವಾಗುವ ಹಾಗೆ ಆಗಿಬಿಟ್ಟಿತು. ಬಾತ್‌ರೂಂ ಬುಲೆಟಿನ್‌ಗಳಿಗೆ ಅದರದ್ದೇ ಆದ ವಿಶೇಷವಿದೆ.

ಕಾರ್ಖಾನೆಗಳಲ್ಲಿ ಸಾಮಾನ್ಯವಾಗಿ ಕಾರ್ಮಿಕರಿಗೆ ವಿಶ್ರಾಂತಿಗೆ ಎಂದು ವಿಶ್ರಾಂತಿ ಕೊಠಡಿಗಳನ್ನು ಏರ್ಪಡಿಸಬೇಕೆಂಬ ಕಾನೂನಿದೆ. ಈ ಕೊಠಡಿಗಳು ನೂರಕ್ಕೆ ತೊಂಬತ್ತರಷ್ಟು ಸಲ ಬಾತ್‌ರೂಂಗಳೇ ಆಗಿರುತ್ತದೆ; ಅಪರೂಪಕ್ಕೆ ಬಾತ್‌ರೂಂಗಳಿಗೆ ಹೊಂದಿಕೊಂಡ ಹಾಗೆ ಈ ಕೊಠಡಿಗಳೂ ಇರಬಹುದು. ಪ್ರತಿ ಘಂಟೆ ಕೆಲಸ ಮಾಡಿದರೆ ಅದೆಷ್ಟೋ ನಿಮಿಷಗಳ ವಿಶ್ರಾಂತಿ ಅಗತ್ಯ ಎಂದು ಕಾನೂನು ಸಹ ಇದೆಯಂತೆ. ಈ ಕಾನೂನನ್ನು ನಂಬಿರುವ ಕಾರ್ಮಿಕರು ಸುಮಾರು ಸಮಯವನ್ನ ವಿಶ್ರಾಂತಿ ಕೊಠಡಿಗಳಲ್ಲಿ ಮತ್ತು ಮಿಷೀನುಗಳ ಹತ್ತಿರ ಕಳೆಯುವ ಸಂಪ್ರದಾಯ ಪಾಲಿಸಿಕೊಂಡು ಬಂದಿರುತ್ತಾರೆ. ಇದವರ ತರಹವೇ ಬಂದು ಸೇರಿರುವ ಸಹ ಕಾರ್ಮಿಕರ ಸಂಗಡ ಅದೂ ಇದೂ ಮಾತುಕತೆ - ಬೀಡಿ ಸಿಗರೇಟುಗಳ ವಿನಿಮಯ, ಹಣಕಾಸಿನ ವ್ಯವಹಾರ ಮೊದಲಾದವು ಇಲ್ಲಿನ ವ್ಯವಹಾರದ ಕೆಲವು ಸ್ಯಾಂಪಲ್ಲುಗಳು. ಇಲ್ಲಿ ನಡೆಯುವ ಮಾತುಕತೆಗಳು ರೆಕ್ಕೆಪುಕ್ಕ ಅಂಟಿಸಿಕೊಂಡು ತಲೆ ಬಾಲ ಕೈಕಾಲು ಬೆಳೆಸಿಕೊಳ್ಳುತ್ತವೆ. ಹಲವಾರು ರೂಪ ತಾಳಿ ಕಿವಿಯಿಂದ ಕಿವಿಗೆ ಹಬ್ಬಿ ಸುದ್ದಿಯ ರೂಪ ಪಡೆಯುತ್ತದೆ. ಅಫಿಷಿಯಲ್ ಸ್ಯಾಂಕ್ಷನ್ ಇಲ್ಲದಂತಹ ಇಂತಹ ಸುದ್ದಿಗಳು ಮೊದಮೊದಲು ಬಾತ್‌ರೂಂ ಬುಲೆಟಿನ್ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಿತ್ತು. ಬಾತ್‌ರೂಂ ಬುಲೆಟಿನ್ ಪದದ ಅರ್ಥ ಹಿಗ್ಗಿ ಹೀರೇಕಾಯಿ ಆಗಿ ಸಾಮಾನ್ಯ ಬುಲೆಟಿನ್ ಪದವನ್ನೂ ಸಹ ಇದು ನುಂಗಿ ನೀರು ಕುಡಿದು ಅವಹೇಳನ ಮಾಡುವ ಹಂತ ಮುಟ್ಟಿತು. ಇದರ ಬಿಸಿ ಬುಲೆಟಿನ್ ಎಂಬ ಪದ ಬಳಸುತ್ತಿದ್ದ

ಕಾರ್ಮಿಕನಾಯಕರಿಗೂ ತಟ್ಟಿ ತಿಳಿಯಿತು. ನಿಧಾನವಾಗಿ ಕಾರ್ಮಿಕ ಸಂಘಗಳ ಪರಿಭಾಷೆಯಿಂದ 'ಬುಲೆಟಿನ್' ಪದ ತನ್ನ ಅಸ್ತಿತ್ವ ಕಳೆದುಕೊಳ್ಳಲಾರಂಭಿಸಿದೆ.

ಬುಲೆಟಿನ್ ಪದದ ಬದಲಿಗೆ ನೋಟೀಸ್, ರೀಡ್ ಅಂಡ್ ಸರ್ಕ್ಯುಲೇಟ್, ಸರ್ಕ್ಯುಲರ್ (Notice, read and circulate, circular) ಮೊದಲಾದ ಪದಗಳು ಪ್ರಯೋಗವಾಗಲಾರಂಭಿಸಿವೆ. ಇದನ್ನೇ ಕನ್ನಡದ ಢಿಂಗರಿಂಗರು ನೋಟೀಸು, ಪ್ರಕಟಣೆ, ಓದಿರಿ ಓದಿಸಿರಿ, ಸುತ್ತೋಲೆ ಮೊದಲಾದ ಪದಗಳಿಂದ ಕನ್ನಡೀಕರಿಸಿ ಭುವನೇಶ್ವರಿಯ ಬಾವುಟವನ್ನು ಮೇಲೇರಿಸಿದ್ದಾರೆ! ಸರ್ಕಲ್ ಅಂದರೆ ವೃತ್ತ, ಸರ್ಕ್ಯುಲರ್ ಎಂದರೆ ವೃತ್ತಾಕಾರವಲ್ಲ - ಹೀಗಿರಲೇಬೇಕಾದರೆ ಈ ರೆಕ್ಟಾಂಗಲ್(Rectangle) ಶೇಪಿನ ಪತ್ರಕ್ಕೆ ಸರ್ಕ್ಯುಲರ್ ಎಂದು ಏಕೆ ಕರೆಯುತ್ತಾರೆ ಎಂದು ನನ್ನಂತಹ ''ಸೀಬೈಟೂ''ಗಳು ಕೆಲವು ಆಗಾಗ ತಲೆಕೆಡಿಸಿಕೊಂಡಿದ್ದೇವೆ.

ಇನ್ನು ಈ ಬುಲೆಟಿನ್ ಅಥವಾ ಸರ್ಕ್ಯುಲರ್‌ಗಳನ್ನು ಹೊರಡಿಸಲು ಸಮಯ ಸಂದರ್ಭಬೇಕೇ? ನನಗೆ ತಿಳಿದ ಹಾಗೆ ಸಮಯ ಸಂದರ್ಭಗಳಿಗಿಂತಲೂ ಹೆಚ್ಚಾಗಿ ತಮ್ಮ ಅಸ್ತಿತ್ವಪ್ರದರ್ಶಿಸಲೆಂದೇ ಈ ಬುಲೆಟಿನ್‌ಗಳು ಬರುತ್ತವೆ. ಕಾರ್ಮಿಕರ ಸಮಸ್ಯೆಗಳು ಮತ್ತು ಅವುಗಳ ಪರಿಹಾರ ಕುರಿತಂತೆ ನಡೆದಿರುವ ಬೆಳವಣಿಗೆಗಳನ್ನು ಕುರಿತಹಾಗೆ ಸಂಘಟನೆಗಳು ಏನು ಕೆಲಸ ಮಾಡುತ್ತಿವೆ ಎಂದು ತಿಳಿಸಲೆಂದೇ ಈ ಬುಲೆಟಿನ್‌ಗಳು ಇವೆಯಾದರೂ ಹಲವಾರು ಬಾರಿ ಈ ಚೌಕಟ್ಟನ್ನು ಮೀರಿರುತ್ತವೆ. ಕೊಜೆಂಟ್ರಿಕ್ಸ್ ವ್ಯವಹಾರ ಕುರಿತೇ ಒಂದು ಬುಲೆಟಿನ್ ಬರಬಹುದು. ವಿಶ್ವಸುಂದರಿ ಸ್ಪರ್ಧೆ ನಡೆಸಿದ್ದು ಸರಿಯೇ ಎಂದು ಬುಲೆಟಿನ್ ಬರಬಹುದು. ರಾಷ್ಟ್ರಪತಿ ನಾರಾಯಣನ್ ಅವರು ಉತ್ತರ ಪ್ರದೇಶದಲ್ಲಿ ಕಲ್ಯಾಣ್‌ಸಿಂಗ್ ಸರಕಾರವನ್ನು ವಜಾಮಾಡಲು ನಿರಾಕರಿಸಿದ್ದೇ ಬುಲೆಟಿನ್‌ನ ವಸ್ತುವಾಗಬಹುದು, ಪಟೇಲರು ಆಲ್ಕೋಹಾಲು ತ್ಯಜಿಸಿದ್ದೇ ಕಾರಣವಾಗಬಹುದು, ಕನ್ನಡ ಸಾಹಿತ್ಯ ಪರಿಷತ್ತಿನಿಂದ ಹಿಡಿದು ಅಮೇರಿಕಾದ ಅಧ್ಯಕ್ಷರ ವರೆಗಿನ ಯಾವುದೇ ಸಂಗತಿ ಈ ಬುಲೆಟಿನ್‌ಗಳ ವಸ್ತುವಾಗಿರಬಹುದು! ಇಂತಹ ವಿಷಯ ನಮ್ಮ ಪರಿಧಿಗೆ ನಮ್ಮ ವ್ಯಾಪ್ತಿಗೆ ನಮ್ಮ ಚೌಕಟ್ಟಿಗೆ ಮೀರಿದ್ದು ಎಂದು ಯಾವ ಕಾರ್ಮಿಕ ಸಂಘಟನೆಗಳೂ ಒಪ್ಪುವುದಿಲ್ಲ; ಜಗತ್ತಿನಲ್ಲಿ ಎಲ್ಲಿ ಏನೇ ನಡೆದರೂ ಅದು ನಮ್ಮ ಕಾರ್ಮಿಕ ಸಂಘಟನೆಗಳನ್ನು ಅಣಕಿಸಲೋ ಅಸ್ಥಿರಗೊಳಿಸಲೋ ಬಲಹೀನಗೊಳಿಸಲೋ ನಡೆಯುತ್ತಿದೆ ಎಂಬ ಆಳವಾದ ಗುಮಾನಿ ಇದ್ದೇ ಇರುತ್ತದೆ! ಅದರಂತೆ ನಮ್ಮ ಯೋಚನಾಧಾಟಿಯೂ ನಡೆಯುತ್ತದೆ. ಸರ್ಕಾರದ ಡಿ-ಇನ್‌ವೆಸ್ಟ್‌ಮೆಂಟ್ ಪಾಲಿಸಿಯಾಗಲೀ, ಮಲ್ಟಿನೇಷನಲ್ಸ್‌ಗಳನ್ನು ನಮ್ಮ ದೇಶದೊಳಗೆ ತರುವುದಾಗಲೀ ನಮಗೆ ಅತ್ಯಂತ ದುರಂತದಾಯಕ ಎಂಬಂತೆ ಚಿತ್ರಿತವಾಗುತ್ತದೆ. ಇವುಗಳ ಸಂಗಡ ಕಾರ್ಮಿಕರನ್ನು ಬುದ್ಧಿಜೀವಿ ಮಟ್ಟಕ್ಕೆ ಏರಿಸುವಂತಹ ತಿಳುವಳಿಕೆ ನೀಡುವ ಪರಿಪಾಠ ಸಹ ಇರುತ್ತದೆ.

ಬೆಂಗಳೂರು ಕಾರ್ಖಾನೆಯ ಕಾರ್ಮಿಕ ಸಂಘಟನೆಗಳು ಯಾವತ್ತೂ ನೇರವಾಗಿ ಕನ್ನಡದಲ್ಲಿ ಬುಲೆಟಿನ್ ತಯಾರಿಸುವುದಿಲ್ಲ. ಅದು ಇಂಗ್ಲಿಷ್ ಒಲೆಯಲ್ಲಿ ಇಂಗ್ಲಿಷ್

ಪಾತ್ರೆಯಲ್ಲಿ ಥೇಮ್ಸ್ ನದಿ ನೀರಿನಲ್ಲಿ ಬೆಂದು ನಂತರ ಕನ್ನಡಕ್ಕೆ ತರ್ಜುಮೆಯಾಗುತ್ತದೆ. 'ಯಾಕೆ ನೇರವಾಗಿ ಕನ್ನಡದಲ್ಲಿ ಮಾಡುಕ್ಕೆ ಆಗುಲ್ಲವೇ?' ಅಂತ ಕೇಳಿ. ಹೀಗೆ ಕೇಳಿದ ನೀವು ಕನ್ನಡದ ಫ್ಯಾನಾಟಿಕ್(Fanatic) ಅಂತ ಲೇಬರ್ ಅಂಟಿಸಿಕೊಳ್ಳುವಿರಿ. ನೋಡ್ರೀ ಫ್ಯಾಕ್ಟರಿ ಅಂದಮೇಲೆ ಬೇರೆ ಬೇರೆ ಭಾಷೆ ಮಾತಾಡೋ ಜನ ಇರ್ತಾರೆ. ಅವರಿಗೆಲ್ಲಾ ಅರ್ಥ ಆಗಬೇಕು ಅಂದರೆ ನಾವು ಇಂಗ್ಲಿಷಲ್ಲೇ ಹಾಕಬೇಕು... ಎಂಬ ವಾದ ಇತ್ತು. ಕನ್ನಡಕ್ಕೆ ತರ್ಜುಮೆಯ ಅವಶ್ಯಕತೆ ಕಂಡದ್ದು 1980ರ ಸರಿಸುಮಾರಿನಲ್ಲಿ ಅಲ್ಲಿಯವರೆಗೆ ಇಂಗ್ಲಿಷ್ ಮಾತೆ ನಮ್ಮವರ ನಾಲಿಗೆ ಮೇಲೆ ನಲಿದಾಡಿದ್ದಳು. 80ರ ಸುಮಾರಿಗೆ 'ಬುಲೆಟಿನ್‌ಗಳ್ನ ಕನ್ನಡದಾಗೂ ಬಿಡ್ರೀ...' ಅಂತ ಕನ್ನಡಿಗರ ವರಾತ ಹೆಚ್ಚಾದಾಗ ಈ ತರ್ಜುಮೆ ಆರಂಭ ಆಗಿದ್ದು. ಈ ತರ್ಜುಮೆ ತಮಾಷೆ ಹೇಗೆ ಅಂದರೆ ಇಂಗ್ಲಿಷ್ ಬುಲೆಟಿನ್ ಬರೆಯುವವರಿಗೆ ಕಾಸುಗೀಸು ಕೊಟ್ಟು ಬರೆಸಿದರೆ ಕನ್ನಡದಲ್ಲಿ ತರ್ಜುಮೆ ಮಾಡಲು ಕಾರ್ಖಾನೆಯಲ್ಲೇ ಯಾರನ್ನೋ ಬಿಟ್ಟಿ ಕೆಲಸಕ್ಕೆ ಹಿಡಿಯುತ್ತಾರೆ. ಆತ ಮುತುವರ್ಜಿ ವಹಿಸಿ ಸರಿಯಾಗಿ ತರ್ಜುಮೆ ಮಾಡಿದರೆ ಸರಿ, ಇಲ್ಲಾಂದರೆ ಇಂಗ್ಲೀಷಿನದಕ್ಕೂ ಕನ್ನಡದಕ್ಕೂ ಅಜಗಜಾಂತರ ವ್ಯತ್ಯಾಸ! 'ನೇರವಾಗಿ ಕನ್ನಡದಲ್ಲೇ ಬರೀಬಾರದೇ?' ಅಂತ ಕೆಲ ಸಲ ವಿಚಾರಿಸಿದ್ದೆ. ನಮ್ಮಲ್ಲಿ ಕನ್ನಡ ಟೈಪಿಂಗು ಇಲ್ಲ ನೋಡಿ ಎಂಬ ಉತ್ತರ ಬಂದಿತ್ತು! ಕನ್ನಡ ಟೈಪಿಂಗು ಆಚೆ ಇದೆ ಆದರೆ ಆರೇಳು ಸಾವಿರ ತೆತ್ತು ಅದನ್ನ ಕೊಳ್ಳುವುದು ಯಾಕೆ ಎಂದು ಇವರ ವಾದ! ಆದರೆ ವಾಸ್ತವದ ಸಂಗತಿ ಎಂದರೆ ಲೀಡರುಗಳು ಯಾರೂ ಕನ್ನಡಿಗರು ಆಗಿಲ್ಲದೇ ಇರುವುದು; ಅಪರೂಪಕ್ಕೆ ಕನ್ನಡದ ಲೀಡರು ಇದ್ದರೂ ಸಹ ಆತನಿಗೆ ಓ ಅಂದರೆ ಠೋ ಅನ್ನಲು ಬರದಿರುವುದು! ಇಂಗ್ಲಿಷಿನಲ್ಲಿ ಹರಿದ ಹಾಗೆ ಭಾಷೆ ಕನ್ನಡದಲ್ಲೂ ಹರಿಯಬಲ್ಲದು ಎಂಬ ತಿಳುವಳಿಕೆ ಇಲ್ಲದಿರುವುದು. ಒಟ್ಟಿನಲ್ಲಿ ಕನ್ನಡದಲ್ಲೂ ಬುಲೆಟಿನ್ ಬುಡ್ರೀ ಎಂಬ ಹರ್ಕೊತ್ತಾಯದಿಂದ ಬಲವಂತವಾಗಿ ಕನ್ನಡಕ್ಕೂ ಮಾಘಸ್ನಾನವಾಗುತ್ತಿದೆ. ಕನ್ನಡ ಹಿತರಕ್ಷಕ ಸಮಿತಿಗಳು ಮಾತ್ರ ನೇರವಾಗಿ ಕನ್ನಡದಲ್ಲೇ ಬುಲೆಟಿನ್ ತಯಾರು ಮಾಡುತ್ತವೆ! ಬುಲೆಟಿನ್‌ಗಳು ಸಾಮಾನ್ಯವಾಗಿ ಅರ್ಧ ಪುಟದಿಂದ ಇಪ್ಪತ್ತು ಮೂವತ್ತು ಪುಟಗಳವರೆಗೆ ವಿಸ್ತರಿಸುವುದುಂಟು.

ಸಾಮಾನ್ಯವಾಗಿ ಒಂದು ಕಾರ್ಖಾನೆಯಲ್ಲಿ ಕನಿಷ್ಟ ಎಂದರೆ ನಾಲ್ಕು ಕಾರ್ಮಿಕ ಸಂಘಗಳಿರುತ್ತವೆ. ಇದರಲ್ಲಿ ಅವಶ್ಯವಾಗಿ ಕಾಂಗ್ರೆಸ್ ಪಕ್ಷದ ನೇತೃತ್ವದ್ದು ಒಂದು, ಎರಡೂ ಕಮ್ಯೂನಿಸ್ಟ್ ಪಕ್ಷಗಳದೂ ತಲಾ ಒಂದು ಮತ್ತು ಬಿ.ಜೆ.ಪಿ.ಯದ್ದು ಒಂದು ಕೆಲವು ಸಂಘಟನೆಗಳು ನಾವು ಯಾವ ರಾಜಕೀಯದವರಿಗೂ ಸೇರಿದವರಲ್ಲ ಎಂದು ಹೇಳಿಕೊಂಡರೂ ಒಳಹೊಕ್ಕರೆ ಅಲ್ಲೂ ಒಂದು 'ಬಾವುಟ' ಕಾಣಬಹುದು! ಈ ರಾಜಕೀಯ ಪಕ್ಷಗಳ ನಿಲುವನ್ನು ಈ ಸಂಘಟನೆಗಳು ಆಗಾಗ್ಗೆ ಬಿಂಬಿಸುತ್ತವೆ. ಮಲ್ಟಿನೇಷನಲ್ಸ್‌ಗಳನ್ನು, ವಿಶ್ರಾಂತಿ ಯೋಜನೆಯನ್ನು ಹೊಗಳಿ ಒಂದು ರಾಜಕೀಯ ಪಕ್ಷದ ಸಂಘಟನೆ ಬುಲೆಟಿವ್ ನೀಡಿದರೆ ಅವುಗಳನ್ನು ತೆಗಳಿ ಮತ್ತೊಂದು ಸಂಘಟನೆ ಮತ್ತೊಂದು ಬುಲೆಟಿನ್ ನೀಡುತ್ತದೆ. ಪರಸ್ಪರರನ್ನು ತೆಗಳಲು ಹೀಯಾಳಿಸಲು ಚುಚ್ಚಲು

ಈ ಬುಲೆಟಿನ್‌ಗಳು ಅತ್ಯಂತ ಅವಶ್ಯಕವಾದ ಆಯುಧ. ತಮಾಷೆ ಎಂದರೆ ಬುಲೆಟಿನ್‌ಗಳನ್ನು 'ಬಿಡದ' ಸಂಘಟನೆ ಸತ್ತಿದೆ ಎಂದೇ ಅರ್ಥ! ''ತಿಂಗಳಿಗೊಂದು ಬುಲೆಟಿನ್ ಅನ್ನೂ ಬಿಡಾಕೆ ತಾಖತ್ತಿಲ್ಲ ಅವರಿಗೆ'' ಎಂದು ಒಂದು ಸಂಘಟನೆ ಮತ್ತೊಂದನ್ನು ಜರಿಯುವುದುಂಟು.

ಕಾರ್ಖಾನೆಗಳಲ್ಲಿ ಆಗಾಗ ನಡೆಯುವ ಚುನಾವಣೆಗಳಲ್ಲಿ ಈ ಬುಲೆಟಿನ್‌ಗಳ ಆರ್ಭಟ ಅತಿಹೆಚ್ಚು. ಈತನಕದ ತಮ್ಮ ಸಾಧನೆ ಕುರಿತು ಪ್ರತಿ ಸಂಘಟನೆಯೂ ಭಾರವಾದ ಬುಲೆಟಿನ್‌ಗಳನ್ನು ಬಿಡುವುದುಂಟು. ಮೇಲಿನ ಸಂಘಟನೆಯ ಹೆಸರು ಮಾತ್ರ ಬೇರೆಯಿದ್ದು ಸಾಧನೆಗಳನ್ನು ಸರ್ವರೂ ತಮ್ಮದೆಂದೇ ಹೇಳಿರುತ್ತಾರೆ! ಹೀಗೆ ಒಂದೆರೆಡು ವಾರ ಬುಲೆಟಿನ್‌ಗಳ ಮಹಾಯುದ್ಧವೇ ನಡೆಯುತ್ತದೆ. ಚುನಾವಣೆ ನಂತರ ಎಷ್ಟು ಸಾವಿರ ಕೇಜಿ ಕಾಗದ ಈ ಬುಲೆಟಿನ್‌ಗಳಿಗೆ ಖರ್ಚಾಯಿತು ಎಂದು ಲೆಕ್ಕ ಹಾಕಿದರೆ ಕೆಲವರಿಗಾದರು ಹೃದಯ ನಿಂತೀತು. ಹಲವಾರು ಸಾವಿರ ಎಕರೆ ಕಾಡುಗಳ ನಾಶ ಈ ಕಾಗದದಿಂದಾಗಿಯೇ ಆಗಿರಬಹುದು ಎಂಬುದನ್ನು ನಮ್ಮ ಪರಿಸರವಾದಿಗಳು ಚಿಂತಿಸಿ ನೇರ ನಿಮ್ಹಾನ್ಸ್ ಸೇರಿದರೂ ಸೇರಿದರೇ!

ಬುಲೆಟಿನ್‌ಗಳು ಯಾವ ಬಣ್ಣದ ಕಾಗದದಲ್ಲಿ ಯಾವ ಬಣ್ಣದ ಮಸಿಯಲ್ಲಿ ಮುದ್ರಿತವಾಗತಕ್ಕದ್ದು ಮುಂತಾದ ವಿವರಗಳನ್ನು ಲಗಾಯ್ತಿನಿಂದಲೇ ಒಂದು Unwritten lawದ ತರಹ ಪಾಲಿಸಿಕೊಂಡು ಬಂದಿರುತ್ತಾರೆ. ಕಮ್ಯೂನಿಸ್ಟರ ಬುಲೆಟಿನ್‌ಗಳು ಬಿಳಿಹಾಳೆ ಮೇಲೆ ಕೆಂಪು ಅಕ್ಷರ, ಬಿ.ಜೆ.ಪಿ. ಅವರದ್ದು ಕಾವಿ ಕಾಗದದ ಮೇಲೆ ಕರಿ ಅಕ್ಷರ, ಕನ್ನಡ ಪದ ಸಂಘಟನೆಗಳಾದರೆ ಹಳದಿ ಪೇಪರಿನ ಮೇಲೆ ಕೆಂಪು ಅಕ್ಷರ ಹೀಗೆ ಈ ಅಲಿಖಿತ ನಿಯಮ ಜಾರಿಯಲ್ಲಿದೆ. ಸುಮಾರು ವರ್ಷಗಳಿಂದ ಈ ಕಾಗದ ಮತ್ತು ಇಂಕುಗಳಿಗೆ ಸಂಭವಿಸಿದ ಹಾಗೆ ಲೇಬರ್‌ಗಳ ಸಂಪ್ರದಾಯ ನಿಷ್ಠರಾಗಿ ಕನ್ಸರ್ವೆಟೀವ್ (Conservative) ಗಳಾಗೇ ವರ್ತಿಸುತ್ತಿರುವುದು ಒಂದು ರೀತಿ ವಿಪರ್ಯಾಸವೆನಿಸುತ್ತದೆ.


ಕಾರ್ಲ್ ಮಾರ್ಕ್ಸ್, ಬಸವಣ್ಣ, ಬುದ್ಧ ಅಂಬೇಡ್ಕರ್ ಮೊದಲಾದವರು ಈ ಬುಲೆಟಿನ್‌ಗಳಲ್ಲಿ ಆಗಾಗ್ಗೆ ಉದ್ಧರಿತರಾಗುತ್ತಾರೆ. ಇದು ಕಮ್ಯೂನಿಸ್ಟರ ಬುಲೆಟಿನ್‌ಗಳಲ್ಲಿ ಹೆಚ್ಚು. ಆದರೆ ಅದೇ ಬಿ.ಜೆ.ಪಿ. ಬುಲೆಟಿನ್‌ಗಳಲ್ಲಿ ಗೀತೆ, ಕುವೆಂಪು, ನಮ್ಮ ಪುರಾಣದ ಶ್ರೇಷ್ಠರ ಹೇಳಿಕೆಗಳು ಮತ್ತು ಆಗಾಗ್ಗೆ ಅಡಿಗರು ಕಾಣಿಸಿಕೊಳ್ಳುತ್ತಾರೆ!

ಕಮ್ಯೂನಿಸ್ಟ್ ವಿಚಾರಧಾರೆಗಳನ್ನು ನಾವು ಕೇರಳ ಮತ್ತು ಬಂಗಾಳದಿಂದ Import ಮಾಡುವುದರಿಂದ ಅಲ್ಲಿ ಕನ್ನಡದ 'ಬನಿ' ಕಡಿಮೆ. ಅನೇಕಬಾರಿ ಬಸವಣ್ಣ ಸಹ wrongly quoted ಮತ್ತು referred! ಅಂದರೆ ಬಿ.ಜೆ.ಪಿ. ವಿಚಾರಧಾರೆಗಳು ಬೆಂಗಳೂರಲ್ಲೇ ಪಸರಿಸುವುದರಿಂದ ಮತ್ತು ಉತ್ತರ ಭಾರತದವರೇ ಇಲ್ಲಿನವರಿಗೂ Hero ಗಳಾಗಿರುವುದರಿಂದ ಮತ್ತು ಕೆಲವು ''ಮಣ್ಣಿನ ಮಕ್ಕಳು'' ಇಲ್ಲಿ

ಸಕ್ರಿಯವಾಗಿರುವುದರಿಂದ ಕನ್ನಡದ 'ಬನಿ' ಕೊಂಚ ಹೆಚ್ಚು. ವಿಪರ್ಯಾಸ ಎಂದರೆ ಇವು ಸಹ ಇಂಗ್ಲೀಷಿನಿಂದ ತರ್ಜುಮೆ ಆಗುವುದು!

ಈ ಬುಲೆಟಿನ್‌ಗಳನ್ನು ಸೀರಿಯಸ್ಸಾಗಿ ಯಾರಾದರೂ ಪರಿಗಣಿಸುತ್ತಾರೆಯೇ? ನಿಜವಾಗಲೂ ಹೇಳಬೇಕೆಂದರೆ ಇಲ್ಲ! ಯಾವುದಾದರು ವಿರೋಧಿ ಸಂಘಟನೆಗೆ 'ಚುಚ್ಚುವ' ಹಾಗಿದ್ದರೆ ಮಾತ್ರ ಅದೂ ಒಂದು ಮರು ಬುಲೆಟಿನ್ ಹೊರಡಿಸುತ್ತದೆ ಅಷ್ಟೇ! ಆಡಳಿತ ವರ್ಗ ಸೇರಿದ ಹಾಗೆ ಮಿಕ್ಕೆಲ್ಲರೂ ಇದನ್ನು ಒಂದು ರೀತಿ"Routine' ಆಗಿ ಸ್ವೀಕರಿಸುತ್ತಾರೆ, ಓದುತ್ತಾರೆ ಎಸೆದು ಹೋಗುತ್ತಾರೆ! ಪ್ರತಿಬಾರಿ ಕಾರ್ಖಾನೆಯಲ್ಲಿ ಈ ಬುಲೆಟಿನ್ ನೀಡುವ ಸಂದರ್ಭದಲ್ಲಿ ಕಸ ಗುಡಿಸುವವರಿಗೆ ಕೊಂಚ ಕೆಲಸ ಜಾಸ್ತಿ!

ಬೆಳಿಗ್ಗೆ ಬೆಳಿಗ್ಗೆ ಫ್ಯಾಕ್ಟರಿ ಎದುರು ಬಸ್ಸಿನಿಂದ ಉಳಿಯುತ್ತಿದ್ದ ಹಾಗೇ ಮುಖ್ಯದ್ವಾರದ ಬಳಿ ಚೀಟಿ ಹಂಚುತ್ತ ಕೆಲವರು ನಿಂತಿದ್ದರೆ ''ಇವತ್ತೇನೋ ಬುಲೆಟಿನ್ ಐತೆ ಎಂದೋ ಇನ್ನಿಕಿ ಬುಲೆಟಿನ್ ಇರ್ಕಿಡೀ...'' ಎನ್ನುತ್ತಲೇ ಕಾರ್ಮಿಕರು ತಮ್ಮ ಅಂದಿನ ಜೀವನ ಆರಂಭಿಸುತ್ತಾರೆ! ಪ್ರೊಲಿಟೇರಿಯನ್ ಜೀವನದಲ್ಲಿ ಬುಲೆಟಿನ್‌ಗಳು ಒಂದು ಅವಿಭಾಜ್ಯ ಅಂಗವಾಗಿ ಹೋಗಿರುವುದು ಕಾರ್ಖಾನೆಗಳಲ್ಲಿ ಮಾತ್ರ ಇರಬೇಕು! ಕನ್ನಡತಾಯಿಯನ್ನು ಭುವನೇಶ್ವರಿ ಎಂದ ಹಾಗೆ ಈ ದೇವರನ್ನು ಬುಲ್‌ಟಿನೇಶ್ವರಿ ಎನ್ನಬಹುದೇನೋ!



ಸಮಸ್ಯೆಯ ಸುರಿಮಳೆ

ಅಥವಾ

''ಸಮಸ್ಯೋಪಖ್ಯಾನ''

- ಲೀಲಾಶೇಖರ್

ಏನು ಬರೀಲಿ? ಈಗಂತೂ ಯಾರು ನೋಡಲಿ ಏನಾದ್ರೂ ಬರೆಯೋರೇ. ಕಥೆ; ಕಾದಂಬರಿ, ಲೇಖನ, ಹರಟೆ, ವ್ಯಂಗ್ಯ ಅಂತ ಏನೇನೋ ಪೇಪರ್ ಗಟ್ಲೆ ಬರ್ದು ತಮ್ಮ ಹೆಸರು ಅಚ್ಚಾದಾಗ ಎಲ್ಲರಿಗೂ ಹೇಳ್ಕೊಂಡು, ಅವರು ಪಡೋ ಸಂಭ್ರಮ ನೋಡಿದಾಗ ನಾನೂ ಯಾಕೆ ಬರೆಯಬಾರದು, ಬರೆದು ಎಲ್ಲರ ಮುಂದೂ ಹೆಮ್ಮೆಯಿಂದ ಬೀಗಬಹುದಲ್ಲ ಅಂತ ಒಂದು ದುರ್ಮುಹೂರ್ತದಲ್ಲಿ ದುರಾಲೋಚನೆಯೊಂದು ನನ್ನ ತಲೆ ಹೊಕ್ಕು ನಾನೂ ಬರ್ದೇ ಬರೀತೀನಿ ಅಂತ ದೃಢ ನಿಶ್ಚಯ ಮಾಡೇಬಿಟ್ಟೆ. ಅಲ್ಲಾ ಬರೀ ಕಥೆ ಕಾದಂಬರಿ ಬರೆದು ಜನರು ಸುಮ್ನೆ ಕಾಲಹರಣಕ್ಕೆ, ರೈಲಿನಲ್ಲಿ, ಬಸ್ಸಿನಲ್ಲಿ, ಟಾಯ್ಲೆಟ್‌ನಲ್ಲಿ ಓದಿ ಬಿಸಾಕೋ ಬದ್ಲು ಈಗ ಎಂತೆಂಥಹ ಜಟಿಲವಾದ ಸಮಸ್ಯೆಗಳನ್ನು ನಿತ್ಯ ಜೀವನದಲ್ಲಿ ಬಡಪಾಯಿ ಪ್ರಜೆಗಳು ಅನುಭವಿಸುತ್ತಿದ್ದಾರೆ ಅದಕ್ಕೊಂದು ಪರಿಹಾರ ಸೂಚಿಸಿ ಉಪಕರಿಸುವಂಥಹ ಲೇಖನ ಬರೆದರೆ...! ಓದಿದವರು ಕೇಳಿದವರು ಮೆಚ್ಚಿಕೊಂಡು ಅದೇ ಪತ್ರಿಕೆಗೆ ''ಇವರ ಲೇಖನ ತುಂಬಾ ಉಪಯುಕ್ತವಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ನಮಗೆ ಇಂತಹ ಲೇಖನಗಳೇ ಬರಬೇಕು... ಲೇಖಕಿಗೆ ಅಭಿನಂದನೆಗಳು ಅಂಥ ನೂರಾರು ಮೆಚ್ಚಿಕೆಯ ಪತ್ರಗಳು ಬಂದರೆ, ತಮ್ಮ 200 ಪುಟದ ಕಾದಂಬರಿಗಳಿಗಿಂತ ಈ ನಾಲ್ಕು ಪುಟದ ಲೇಖನ ಇಷ್ಟು ಮೆಚ್ಚಿಗೆ ಗಳಿಸಿತಲ್ಲ ಅಂತ ಬಾಕಿ ಲೇಖಕ-ಲೇಖಕಿಯರೆಲ್ಲ.... ಹೊಟ್ಟೆಕಿಚ್ಚು ಪಟ್ಟಾಗ... ವಾಹ್.... ವೆರಿಗುಡ್ ಐಡಿಯಾ... ರಿಯಲಿ ಈ ತರಹ ಐಡಿಯಾ ಹೊಳೆಯೋದು ತಲೆ... ತಲೆ ಬೇಕು ಅಲ್ವಾ...''

ಅಂದ ಹಾಗೆ ಈಗ ನಾವು ಮುಖ್ಯವಾಗಿ ಎದುರಿಸುತ್ತಿರುವುದು ಅಧಿಕ ದರ ಹಾಗೂ ಆಹಾರ ಸಮಸ್ಯೆ.. ದಿನದಿನಕ್ಕೆ ಬೆಟ್ಟಕ್ಕೆ ಏರುತ್ತಿರುವ ಬೆಲೆಯನ್ನು ಇಳಿಸೋದು ಹೇಗೆ? ದುಡ್ಡು ಕೊಟ್ಟರೂ ಕೆಲವು ಸಾಮಾನು ಸಿಗೋದೇ ಇಲ್ಲ... ನೀವು ನಂಬ್ತಿರೋ ಇಲ್ಲವೋ ಮೊನ್ನೆ ಇದ್ದಕ್ಕಿದ್ದ ಹಾಗೆ ಪೂರಿ-ಸಾಗು ತಿನ್ನಲೇಬೇಕು ಅನ್ನಿಸಿತು. ಮೈದಾ ಹಿಟ್ಟಿನ ಪೂರಿ ಬಿಸಿ ಬಿಸಿಯಾಗಿ ಇಷ್ಟು ದಪ್ಪ ಉಬ್ಬಿದರೆ ಎಷ್ಟು ಚೆನ್ನಾಗಿರುತ್ತೆ ಅಲ್ವಾ... ಊರೆಲ್ಲಾ ಹುಡುಕಿದರೂ ಮೈದಾ ಹಿಟ್ಟು ಸಿಕ್ಕಲಿಲ್ಲ - ಆಸೆಯನ್ನು ಹತ್ತಿಕ್ಕಲಾರದೆ ಮಕ್ಕಳು ಮರಿ ಎಲ್ಲಾ ಹೋಟೆಲ್‌ಗೆ ಹೋಗಿ ತಿಂದು ಬಂದೆವು ಅನ್ನಿ- ಮನೆ ಅಡುಗೆ ಸಮ ಬರುತ್ಯೇ, ಒಂದಕ್ಕೆರಡು ದುಡ್ಡು ತೆತ್ತರೂ ಸುಖವಿಲ್ಲ... ಎಲ್ಲರೂ ಸಾಮಾನುಗಳನ್ನು

ತೆಗೆದುಕೊಳ್ಳೋದೇ ಬಿಟ್ಟರೆ ಹೇಗೆ? ಬೆಲೆ ಕಮ್ಮಿಯಾಗಬಹುದೇನೋ... ಸರಿಹೋಯಿತು ಉಪವಾಸ ಸಾಯಬೇಕೂಂತೀರಾ... ಹದಿನಾರು ರೂ. ಕಿಲೋಗೆ ಕೊಟ್ಟಾದರೂ ಒಳ್ಳೆ ಅಕ್ಕೀನೇ ತಂದು ಅಚ್ಚುಕಟ್ಟಾಗಿ ಮೂರು ಹೊತ್ತು ಊಟ ಮಾಡಿದರೂ, ಸಾಯಂಕಾಲದ ಹೊತ್ತಿಗೆ ಹೊಟ್ಟೆ ಹಸಿವು ಅಂತ ಬರೋ ಮಕ್ಕಳ ಜೊತೆ ನನ್ನ ಹೊಟ್ಟೆಯೇ ಹಸಿವು ಹಸಿವು ಅಂತ ತಾಳ ಹಾಕುತ್ತಿತ್ತು. ''ದರಿದ್ರಕ್ಕೆ ಅಧಿಕ ಮಾಸ'' ಅಂತಾರಲ್ಲ ಹಾಗೆ ಬೆಲೆ ಜಾಸ್ತಿಯಾದಷ್ಟು ಹಸಿವು ಜಾಸ್ತಿಯಾಗುತ್ತೆ - ಅದೇನೋ ಕಲಬೆರಕೆ ಅಂತಾರಲ್ಲ ಹಾಗೆ ಅದೇನಾದರೂ ಇರಬಹುದು. ತಿಂದಾಗ ತುಂಬಿದ ಹಾಗಿರೋ ಹೊಟ್ಟೆ ಅರ್ಧಘಂಟೆಗೆ ಖಾಲಿಯಾಗುತ್ತೆ. ಮತ್ತೆ ಬ್ಲಾಕೋ, ವೈಟೋ, ಯಾವುದರಲ್ಲೋ ರವೆ, ಗೋಧಿ, ಮೈದಾ ತಂದು ಅಚ್ಚುಕಟ್ಟಾಗಿ ಏನಾದ್ರು ಮಾಡಿ ತಿಂದರೇನೆ ತೃಪ್ತಿ. ನೀವು ಏನೇ ಹೇಳಿ ಮನುಷ್ಯ ಬದುಕಿರೋದೆ ತಿನ್ನೋಕೋಸ್ಕರ. ಬೆಲೆ ಜಾಸ್ತಿಯಾಯ್ತು ಅಂತ ತಿನ್ನೋದನ್ನ ಬಿಡೋಕಾಗುತ್ತೇನು. ಎಂತೆಂಥಹ ದೊಡ್ಡ ಹೊಟ್ಟೆ ತಲೆಗಳು (ತಲೆ ಇರೋದು) ಈ ವಿಷ್ಯದಲ್ಲಿ ಎಷ್ಟೋ ಭಾಷಣ ಬಿಗಿದು ಚಳುವಳಿ ಮಾಡಿ ಸತ್ಯಾಗ್ರಹ (ಜನಗಳ ಎದುರಿಗೆ ಮಾತ್ರ ಒಳಗೆ ರವೆ ಸಜ್ಜಿಗೆ, ಬಾದಾಮಿ ಹಾಲು ಗುಟ್ಟಾಗಿ ಹೊಡೆದಿರಾತ್ತಾರೆ) ಮಾಡಿದರೂ ಸಾಲ್ವ್ ಆಗದೇ ಇರೋ ಈ ಪ್ರಾಬ್ಲಂ ನನ್ನ ಪುಟ್ಟಗೋಸಿ ಲೇಖನದಿಂದ ಆಗುತ್ಯೇ..! ಲಿವ್ ಇಟ್ ಸುಖವಾಗಿ ತಿಂದು ಹಾಯಾಗಿರೋಣ...

ಬೇರೆ ಯಾವ ಸಮಸ್ಯೆ ತಗೋಳ್ಳೋದು.... ಆ ಗೊತ್ತಾಯ್ತು. ಅಧಿಕ ಜನಸಂಖ್ಯೆ... ಸರ್ಕಾರ ಬೀದಿ ಬೀದಿಯಲ್ಲಿ ಟಿ.ವಿ., ರೇಡಿಯೋ, ಪೇಪರ್, ಗೋಡೆಗಳು ಕಸದ ತೊಟ್ಟಿ, ಎಲ್ಲೆಲ್ಲೂ 'ನಿರೋಧ್ ಉಪಯೋಗಿಸಿ' ಅಂತ ಪ್ರಚಾರ ಮಾಡಿದ್ದೂ ಮಾಡಿದ್ದೆ - ಆದರೆ ಜನಸಂಖ್ಯೆ ದಿನದಿನಕ್ಕೆ ಏರುತ್ತಲೇ ಇದೆ. ಅಧಿಕ ದರ, ಆಹಾರ ಕೊರತೆ ಎಲ್ಲಕ್ಕೂ ಈ ಅಧಿಕ ಜನಸಂಖ್ಯೆಯೇ ಮೂಲ ಕಾರಣ. ಸರ್ಕಾರ ಒದರೋ ಹಾಗೆ ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ ಅಂತ ಎಲ್ಲರ ಮನೇಲೂ ಎರಡೇ ಮಕ್ಕಳಿದ್ದರೆ ಎಷ್ಟು ಚೆನ್ನಾಗಿರುತ್ತೆ ಜನಗಳಿಗೆ ಯಾಕೆ ಅರ್ಥವಾಗೊಲ್ಲವೋ ತಮ್ಮ ಆರ್ಥಿಕ ಪರಿಸ್ಥಿತಿ ಯೋಚಿಸಬಾರದೇ? ಬೇರೆ ಕೆಲಸವೇ ಇಲ್ಲವೇ ವರ್ಷಕ್ಕೊಂದು ಇಳಿಸುತ್ತಿರೋದು... ಥೇ... ಥೇ... ತಿಳ್ಕೋಬೇಕಪ್ಪ! ''ಅಂದಹಾಗೆ ನಿಮಗೆಷ್ಟು ಮಕ್ಕಳೂರೀ?' ಅಂದ್ಕೊಂಡೆ - ನೀವ್ಯಾರಾದ್ರು ಈ ಪ್ರಶ್ನೆ ಕೇಳೇ ಕೇಳ್ತೀರಿ ಅಂತ - ಯಾಕೇಂದ್ರೆ ಕುಟುಂಬ ಯೋಜನೆ ಬಗ್ಗೆ ಲೆಕ್ಚರ್ ಕೊಡ್ತಿದಾಳೆ... ಇವಳಿಗೆ ಆ ಅರ್ಹತೆ ಇದೆಯೇ ಅಂತ ನೀವು ಯೋಚಿಸ್ತಾ ಇದ್ದೀರಾ ಅಲ್ಲವಾ.... ಒಪ್ಪಿದೆ... ಸಮಯಕ್ಕೆ ಸರಿಯಾಗಿ ಆ ಪ್ರಶ್ನೆ ಹಾ? ಬಿಟ್ಟರೆ ಉತ್ತರಿಸಬೇಕಲ್ಲವಾ... ನೋಡಿ ನಿಮಗೆ ಗೊತ್ತೋ ಇಲ್ಲವೋ... ಯಾವಾಗ್ಲೂ ಉಪದೇಶ ಮಾಡೋರು ಅದನ್ನ ಆಚರಿಸಲೇ ಬೇಕೂಂತ ರೂಲ್ಸೇನೂ ಇಲ್ಲ... ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಮನುಷ್ಯರು ಹೇಳಿದ್ದೆಲ್ಲಾ ಮಾಡ್ತಾನೇ ಇದ್ದಾರಾ... ಅವರು ಉಪದೇಶ ಕೊಡ್ತಾರೆ ನೀವು ಪಾಲಿಸಬೇಕು. ಅವರೂ ಹಾಗೇ ಇರ್ಬೇಕು ಅನ್ನೋದೇನು ಕರ್ಮ... ಅದೂ ಅಲ್ಲದೆ ನೋಡಿ ಈ ಮಕ್ಕಳು ಆಗೋದು ಆ ಮೇಲಿರೂ ಭಗವಂತನ ಇಚ್ಛೆ, ಅದನ್ನು ತಡೆಯೋಕೆ ನಾವ್ಯಾರು? ನಾಚಿಕೆಯಾಗೊಲ್ಲ... ಏನೂ ತಿಳಿಯದ ಮೂಢಳ

ಹಾಗೆ ಭಗವಂತನ ಕೃಪೆ ಅನ್ನೋಳು... ಬೇರೆಯೋರಿಗೆ ಹೇಳ್ತೀಯಾ? ಬಾಯಿ ಮುಚ್ಚಕೊಂಡು ಬಿದ್ದಿರು ಅಂತಿರೇನೋ ಅಲ್ವೇ...? ನೋಡಿ ಮದುವೆಯಾದ ಹೊಸದು ಕುಟುಂಬ ಯೋಜನೆ ಬಗ್ಗೆ ಯೋಚಿಸೋ ಅಷ್ಟು ಟೈಮೆಲ್ಲಿರುತ್ತೆ. ಹನಿಮೂನ್ ಮುಗಿಸ್ಕೊಂಡು ಬಂದ ಒಂಭತ್ತು ತಿಂಗಳಿಗೆ ಹುಟ್ಟಿದಳು ಸುಪುತ್ರಿ. ಗಂಡಾಗಬಾರದಿತ್ತೇ ಅಂತ ಅಂದ್ಕೊಂಡರೂ ಕಾಲ ಮಿಂಚಿಲ್ಲ ''ಬೆಟರ್ ಲಕ್ ನೆಕ್ಸ್ಟ್ ಟೈಂ'' ಅಂತ ಮತ್ತೆ ಪ್ರಯತ್ನಿಸಿದಾಗಲೂ ಮಗಳೇ ಹುಟ್ಟಿದಳು, ಮರಳಿಯತ್ನವ ಮಾಡು, ಮರಳಿಯತ್ನವ ಮಾಡು, ಅಂತ ದೃಢ ನಿಶ್ಚಯದಿಂದ ವಂಶೋದ್ಧಾರಕನಿಗಾಗಿ ಮತ್ತೆ ಮೂರು ಸಾರಿ ಪ್ರಯತ್ನಿಸಿ ಪಂಚಮಹಾ ಪಾತಕಿ (ಕನ್ಯೆ)ಯರನ್ನು ಹೆತ್ತಿದ್ದಾಯಿತು. ಅಯ್ಯೋ ಪಾಪ ಅಂತ ಸಿಂಪತಿ ತೋರಿಸ್ತೀರಾ? ಸಾರಿ ನಿಮ್ಮ ಸಿಂಪತಿ ನನಗೇನು ಅವಶ್ಯವಿಲ್ಲ. ಯಾಕೇಂದ್ರೆ ನಮ್ಮ ಹಠದಿಂದ ಈಗ ಗಂಡುಮಗನೇ ಹುಟ್ಟಿದ್ದಾನೆ. ಕುಟುಂಬ ನಿಯಂತ್ರಣ ಅಂತ ಎರಡಕ್ಕೆ ಫುಲ್‌ಸ್ಟಾಪ್ ಹಾಕಿದ್ದಿದ್ರೆ ಈ ಮಗ ಹುಟ್ಟುತ್ತಿದ್ದನೇನು? ನನ್ನಂಥ ಒಬ್ಬಿಬ್ಬರಿಗೆ ರಿಯಾಯಿತಿ ಕೊಟ್ಟುಬಿಡಿ - ಬಾಕಿಯೋರು ಒಂದು ಗಂಡು, ಒಂದು ಹೆಣ್ಣು.... ಬಸ್, ಕುಟುಂಬ ನಿಯಂತ್ರಣ ಪಾಲಿಸಲೇಬೇಕು. ಆರು ಮಕ್ಕಳ ತಾಯಿಯಾದ ನಿನಗೆ ಈ ಪ್ರಾಬ್ಲಂ ಸಾಲ್ವ್ ಮಾಡೋಕೆ ಹಕ್ಕಿಲ್ಲ ಅಂತೀರಾ... ಹೋಗ್ಲಿ ಬಿಡಿ ಈ ಸಮಸ್ಯೆ ಬೇಡ - ಬೇರೆ ಯಾವುದಾದರೂ ಪ್ರಾಬ್ಲಂ ತಗೊಂಡ್ರೆ ಸರಿ.

ನಿರುದ್ಯೋಗ, ಲಂಚ, ವಿದ್ಯಾಭ್ಯಾಸ, ಸಿನಿಮಾದಲ್ಲಿ ವೈಲೆನ್ಸ್ ಅನೀತಿ.... ಅನಾಚಾರ, ರೇಪ್‌ಕೇಸ್, ಯಾವುದಾದರೊಂದು ಮೊನ್ನೆ ನನ್ನ ಹಿರೀ ಮಗಳಿಗೆ ಪಿ.ಯು.ಸಿ.ಗೆ ಸೇರಿಸಲು ಪ್ರಿನ್ಸಿಪಾಲರಿಗೆ ಲಂಚ, ರೆಕ್‌ಮೆಂಡ್ ಮಾಡಿದವರಿಗೆ ಲಂಚ ತೆತ್ತು ಸೀಟು ದೊರಕಿಸಿಕೊಂಡ ನಾನು ಯಾವ ಬಾಯಿಂದ 'ಲಂಚ ಕೊಡ್ಬೇಡಿ' ಅಂತ ಹೇಳಲಿ?


'ಅಮ್ಮಾ... ಅಮ್ಮಾ ನಾನು ಪರೀಕ್ಷೆಗೆ ಅಂತ ಇಟ್ಟುಕೊಂಡಿದ್ದ ಪೇಪರ್ ತಗೊಂಡ್ಯಾ... ಥತ್ ಏನಮ್ಮ ನೀನು ನಾನೀಗ ಏನು ಮಾಡಲಿ? ಮೊದಲೇ ಪೇಪರ್ ಬೆಲೆ ಜಾಸ್ತಿಯಾಗಿದೆ... ನೀನ್ಯಾಕೆ ಬರೆದು ಬರೆದು ಹಾಳುಮಾಡ್ತಿ' ಅಂತ ನನ್ನ ಎರಡನೇ ಮಗಳು ಬಿರುಗಾಳಿಯಂತೆ ಬಂದು, ನಾನಿಟ್ಟುಕೊಂಡಿದ್ದ ಪೇಪರ್ ಕಿತ್ತುಕೊಂಡು ಹೋದಳು. ''ಅಮ್ಮ ನನ್ನ ಪೆನ್ ತಗೊಂಡ್ಯಾ - ಎಷ್ಟು ಸಾರ್ತಿ ನಿಂಗೆ ಹೇಳೋದು. ನನ್ನ ಪೆನ್ ಮುಟ್ಬೇಟ ಅಂತ... ಹೇಗ್ಹೇಗೋ ಬರೆದು ಹಾಳ್ಮಾಡ್ತೀಯ ನನ್ನ ಪೆನ್ ಕೊಡಿಲ್ಲಿ...''


''ಅಯ್ಯೋ... ಸ್ವಲ್ಪ ಇರೇ... ಆಗಿಹೋಯ್ತು... ಏನಾದ್ರು ಪ್ರಾಬಂ... ಅಯ್ಯೋ ಪ್ರಾಬ್ಲಂ ಗೇನು ಬರ... ಗೊಬ್ಬರದ ಸ್ಕ್ಯಾಮ್, ಸಕ್ಕರೆ ಸ್ಕ್ಯಾಮ್, ಬೋಫರ್ಸ್, ಚಪ್ಪಲಿ ಎಷ್ಟೊಂದು ಸ್ಕ್ಯಾಮ್ (Scam)ಗಳು... ಅಥವಾ ಈಗಿನ ತಾಜಾ ಖಬರ್ ಕೇಸರಿ ವರ್ಸಸ್ ದೇವೇಗೌಡ, ಚಂದ್ರಾಸ್ವಾಮಿ, ಪಿ.ವಿ.ನ. ಮುಖ್ಯ ಮುಖ್ಯವಾದ ರಾಜಕಾರಣಿಗಳೆಲ್ಲಾ ಮಾಡಬಾರದ್ದು ಮಾಡಿ ಸಿಕ್ಕಿ ಹಾಕಿಕೊಂಡಿರೋದನ್ನೇ ಬರೆದರೆ? ಬೊಂಬಾಟ್ ಐಡಿಯಾ... ಅಲ್ಲ ನಂಗೆ ಮೊದ್ಲು ಹೊಳೀಲೇ ಇಲ್ಲವಲ್ಲ...'' 'ಲೋ ರವಿ ಅಟ್ಟದಮೇಲೆ ತುಂಬಿರೋ ಹಳೇಪೇಪರ್‌ಗಳನ್ನ ತೆಕ್ಕೊಡೋ... ರೀಸೆಂಟ್ ಸ್ಕ್ಯಾಮ್‌ಗಳ ಬಗ್ಗೆ ಬಂದಿರೋದು ಎಲ್ಲಾ ಓದಿ ಒಂದು ಕಲಸು ಮೇಲೋಗರದಂಥಹ ಆರ್ಟಿಕಲ್

ಬರುತೀನಿ'' ''ಹಳೇ ಪೇಪರ್ರಾ... ಎಲ್ಲಿದೇಮ್ಮಾ... ಮೊನ್ನೆ ಹೀರೋ ನಂ ಒನ್ ಫಿಲ್ಮ್ ಫಸ್ಟ್‌ಡೇ ಫಸ್ಟ್‌ಶೋಗೆ ಹೋಗೋಕೆ ದುಡ್ಡಿರಲಿಲ್ಲ... ನೀನು ಕೇಳಿದ್ರೆ ಕೊಡೋಲ್ಲಾಂತ ನೀನು ಆಲ್ ಇಂಡಿಯಾ ರೇಡಿಯೋ ಸದ್ದಕ್ಕನ ಮನೆಗೆ ಹೋಗಿದ್ದಾಗ ಹಾಕಿ ಬ್ಲಾಕ್‌ನಲ್ಲಿ ಟಿಕೀಟ್ ತಗೊಂಡು ಹೋದೆ'' ಅಂದ ಗೋವಿಂದನ ಫ್ಯಾನಾದ ನನ್ನ ಮಗ...

''ಬಡ್ಡಿ ಮಗನೇ... ಯಾರನ್ನ ಕೇಳಿ ಹಾಕಿದ್ದಿ... ಪೇಪರ್ ಓದಿ... ಏನಾದ್ರೂ ಪ್ರಾಬ್ಲಂ...'' ''ಏನೇ ಅದು ನಿನ್ನ ಪ್ರಾಬ್ಲಂ... ಅಡಿಗೆ ಮನೇಲಿ ಹುಳಿ ಒಲೆ ಮೇಲಿಟ್ಟು ಬಂದು ಮರೆತು ಹೋಗಿದ್ದಿ... ಸೀದು ಹೊಕ್ಕರೆಯಾಗಿದೆ.. ಕೆಳಗಡೆ ಒಂದು ಕೆಂಡದ ಉಂಡೆ ಕೂತಿದೆ. ಬೇರೆ ಏನು ಮಾಡ್ಬೇಕು ಅನ್ನೋ ಪ್ರಾಬ್ಲಂ ಮೊದ್ಲು ಸಾಲ್ವ್ ಮಾಡು ಅಂದರು ಒಳಗಡೆಯಿಂದ ನಮ್ಮವರು....

''ಥತ್ ನನಗೆ ಬರೆಯೋಕೆ ಆಗುತ್ತ್ಯೆ - ಈ ಗಂಡ, ಮಕ್ಕಳು ಊಟ... ತಿಂಡಿ ಕಾಫಿ.. ಅಂತ ಇದೇ ದೊಡ್ಡ ಪ್ರಾಬ್ಲಂ.. ಇದು ಮಾಡಿ ಮುಗಿಸೋಕೆ ದಿನಾ ಪೂರ್ತಿ ಬೇಕು ಇನ್ನು ನಾನೇನು ದೇಶದಸಮಸ್ಯೆಸಾಲ್ವ್‌ಮಾಡ್ತೀನಿ... ಛೆ... ಒಳ್ಳೆರುಚಿಯಾಗಿತ್ತು... ಕಡಲೆಕಾಳು ಬೂದುಗುಂಬಳಕಾಯಿನ ಹುಳಿ... ಬರೆಯೋಕೆ ಕೂತ್ಕೊಂಡು ಸೀಸಿದೆ.. ಪಾತ್ರೇನೂ ಹೋಯ್ತು. ಯಾರಿಗೆ ಬೇಕಾಗಿದೆ ಈ ಬರವಣಿಗೆ... ಅಚ್ಚುಕಟ್ಟಾಗಿ ಮಾಡ್ಕೊಂಡು ತಿನ್ನೋದೇ ಸರಿ ವೀಣಾ... ತಗೊಳ್ಳೆ ನಿನ್ನ ಪೆನ್ ಅಂತ ಬಿಸಾಕಿ ಮೇಲೆದ್ದೆ.





Printed by V.R. NATH for the Publisher M. SHIVAKUMAR, Published and owned by M. SHIVA KUMAR. 36 6th Main Road, Malleswaram, Bangalore-560 003. Printed at IMPRESSIONS 404 Sampige Road, Malleswaram, Bangalore-560 003. Editor : M. SHIVAKUMAR